ವಿಶ್ವವಾಣಿ

ಸಂಪಾದಕೀಯ

ಸುಪ್ರೀಂ ಆದೇಶ ಪಾಲನೆ ಜವಾಬ್ದಾರಿ ಮರೆತರೆ ರೈತರು?

ಸುಪ್ರೀಂ ಕೋರ್ಟ್ ಕೇಂದ್ರ ಸರಕಾರ ಜಾರಿಗೆ ತಂದಿರುವ ಮೂರು ಕೃಷಿ ಕಾಯಿದೆಗಳಿಗೆ ತಡೆಯಾಜ್ಞೆ ನೀಡಿದೆ. ಮಾತುಕತೆ ನಡೆಸಲು ಸಮಿತಿಯೊಂದನ್ನು ರಚಿಸಿದೆ. ಆದರೂ ರೈತರು ಪ್ರತಿಭಟನೆ ಮುಂದುವರಿಸಿ ರುವುದು ಸಮಂಜಸವೇ ಎಂಬುದು ಪ್ರಶಾರ್ಹ ಸಂಗತಿ. ಮಸೂದೆ ಜಾರಿ ವಿಚಾರದಲ್ಲಿ ರೈತರು ಅನುಸರಿಸುತ್ತಿರುವ ನೀತಿ ದಿಕ್ಕು ತಪ್ಪುತ್ತಿರುವ ಲಕ್ಷಣಗಳನ್ನು ಸೂಚಿಸುತ್ತದೆ. ಕೃಷಿ ಮಸೂದೆ ವಿರೋಧಿಸಿ ದೆಹಲಿ ಗಡಿಯಲ್ಲಿ ಪ್ರತಿಭಟನೆ ಆರಂಭಿಸಿದ ರೈತರು ಕೇಂದ್ರ ಸರಕಾರ ಆಹ್ವಾನಿಸಿದ ಹಲವು ಸುತ್ತಿನ ಮಾತುಕತೆಗಳಲ್ಲಿ ವಿರೋಧ ವ್ಯಕ್ತಪಡಿಸಿದ್ದರು. ಇದರಿಂದ ನ್ಯಾಯಾಲಯದ ಮೆಟ್ಟಿಲೇರಿದ ಪ್ರಕರಣಕ್ಕೆ ತಡೆಯಾಜ್ಞೆ ದೊರಕಿತು. ಈ ಆದೇಶವನ್ನು ಗೌರವಿಸುವುದು ರೈತರ ಕರ್ತವ್ಯವಾಗಿತ್ತು. ನ್ಯಾಯಾಲಯಗಳ ಆದೇಶವನ್ನು ಪಾಲಿಸಬೇಕಿರುವುದು ಪ್ರತಿಯೊಬ್ಬ ಪ್ರಜೆಗಳ ಕರ್ತವ್ಯವೂ ಹೌದು. ತಡೆಯಾಜ್ಞೆ ಜತೆಗೆ ಈ ಸಮಸ್ಯೆ ರೈತರ ಜೀವನ್ಮರಣದ ಸಮಸ್ಯೆ ಎಂಬುದಾಗಿಯೂ ಸೂಚಿಸಿದೆ. ನ್ಯಾಯಾಲಯ ರೈತರ ಪರ ಕಾಳಜಿ ಹೊಂದಿರುವುದಕ್ಕೆ ನಿದರ್ಶನವಿದು. ಆದರೂ ಪ್ರತಿಭಟನೆ ಮುಂದುವರಿಸಿ ರುವುದು ನ್ಯಾಯಾಲಯಕ್ಕೆ ತೋರುವ ಅಗೌರವ. ಇದೀಗ ಸುಗ್ಗಿ ಹಬ್ಬವನ್ನು ಆಚರಿಸಬೇಕಾದ ರೈತರು ಕೃಷಿ ಮಸೂದೆ ಬಿಲ್‌ಗಳನ್ನು ಸುಟ್ಟಿರುವುದು ದುರಂತ ಸಂಗತಿ. ಕೇಂದ್ರ ಬಿಜೆಪಿ ಸರಕಾರ ಆಡಳಿತಕ್ಕೆ ಬಂದಾಗಿನಿಂದ ಇದುವರೆಗೆ ಅನೇಕ ಮಹತ್ವದ ಯೋಜನೆಯಗಳನ್ನು ಘೋಷಿಸಿದೆ. ಆದರೆ ಕೃಷಿ ಮಸೂದೆ ಜಾರಿಯಲ್ಲಿ ವಿಫಲವಾಯಿತೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತಿದೆ. ಕೃಷಿಗೆ ಪೂರಕವಾಗಲೆಂದು ಕೇಂದ್ರ ಸರಕಾರ ಜಾರಿಗೊಳಿಸಿದ ಮೂರು ಮಸೂದೆಗಳು ತಡೆಯಾಜ್ಞೆಗೆ ತುತ್ತಾಗಿರುವುದು ಕಳವಳಕಾರಿ. ಕೇಂದ್ರ ಸರಕಾರ ನ್ಯಾಯಾಲಯದ ಆದೇಶದ ಪರಿಪಾಲನೆಗೆ ಮುಂದಾಗಿರುವಂತೆಯೇ ರೈತರು ಪ್ರತಿಭಟನೆ ಸ್ಥಗಿತಗೊಳಿಸಿ ಆದೇಶ ಪಾಲಿಸಬೇಕಿರುವುದು ಸರಿಯಾದ ಮಾರ್ಗ.

ಸೊಂಪಾದಕೀಯ

ಗುಂಡು: ಹಾಕುವುದು ಮತ್ತು ಹೊಡೆಯುವುದು

ಈ ಸುದ್ದಿ ಓದಿದ ತಕ್ಷಣ ಮೊದಲಿಗೆ ಮಾಮೂಲಿ ಕ್ರೈಂ ನ್ಯೂಸ್ ಥರ ಭಾಸವಾಗುತ್ತದೆ. ಗುಂಡು ಹಾರಿಸಿ ಪತ್ನಿಯ ಕೊಲೆ ಎಂಬುದು ಸುದ್ದಿ. ಆದರೆ ತಮಾಷೆ ಮಾಡೋಕೆ ಹೋಗಿ ಅಮಾಸೆ ಆಗಿರುವುದರಿಂದ ಇದು ಆಭಾಸಕಾರಿ ಘಟನೆ ಎನ್ನಬಹುದೇನೊ. ತುಮಕೂರು ತಾಲೂಕಿನ ಹೆಬ್ಬೂರು ಬಳಿ ಈ ವಿಲಕ್ಷಣ ಘಟನೆ ನಡೆದಿದೆ. ಆಗಿದ್ದು ಇಷ್ಟು : ಗಂಡ ಎಂಬ ಈ ಪ್ರಾಣಿ, ಪ್ರಾಣಿಗಳನ್ನು ಬೇಟೆಯಾಡುವಂಥ ನಾಡಬಂದೂಕನ್ನು ಗೆಳೆಯನೊಬ್ಬನಿಂದ ತೆಗೆದುಕೊಂಡುಬಂದಿದ್ದ. ಅದೇನಾಯಿತೋ ಏನೊ. 'ಗುಂಡು ಹೊಡೆಯುವುದನ್ನು ಕಲಿಸುತ್ತೇನೆ ಬಾ' ಎಂದು ಹೆಂಡತಿಯನ್ನು ಕರೆದ. ಪಾಪ. ಪತಿಯ ಆಜ್ಞೆಯನ್ನು ಶಿರಸಾವಹಿಸಲೆಂದೋ, ಗಂಡನ ಮಾತನ್ನು ತೆಗೆದುಹಾಕುವುದು ಬೇಡ ಅಂತಲೋ, ಆಯಿತು ಅಂತ ಬಂದಳು. ಗುಂಡು ಹೊಡೆಯುವುದನ್ನು ಕಲಿಸಲು ಮುಂದಾದ. ವಿಲಿಯಂ ಟೆಲ್ ಗೊತ್ತಲ್ಲ. ತನ್ನ ಮಗನ ಕೂದಲೂ ಕೊಂಕದಂತೆ ಆತನ ತಲೆಯ ಮೇಲಿರುವ ಸೇಬನ್ನು ಮಾತ್ರ ಹೊಡೆದುರಿಳಿಸಿದ. ಆದರೆ ಈತ ಟೆಲ್ ಅಲ್ವಲ್ಲ. ಹೀಗಾಗಿ ಏನೋ ಮಾಡಲು ಹೋಗಿ ಏನೋ ಆಯಿತು. ಆತ ನೇರ ಹೆಂಡತಿಯ ತಲೆಗೇ ಗುಂಡು ಹೊಡೆದುಬಿಟ್ಟ. ಪ್ರಾಣದ ಪತ್ನಿಯ ಪ್ರಾಣಪಕ್ಷಿ ಹಾರಿಹೋಯಿತು. ಹಾಗೆಂದು ಇದೇನೋ ಅಚಾತುರ್ಯದಿಂದಾದ ದುರಂತ ಅನ್ನುವಂತಿಲ್ಲ. ಯಾಕೆಂದರೆ ಆ ಸಮಯದಲ್ಲಿ ಆತ ಸರಿಯಾಗಿ ಗುಂಡು ಹಾಕಿದ್ದ. ಗುಂಡಿನ ಮತ್ತಲ್ಲಿ ತೇಲುತ್ತಿದ್ದ ಆತನಿಗೆ ಮುಂಬರುವ ಆಪತ್ತಿನ ಅರಿವಿರಲಿಲ್ಲ. ಅವನಿಗೆ ಗುಂಡು ಹಾಕುವುದು ಗೊತ್ತಿತ್ತೇ ಹೊರತು ಗುಂಡು ಹೊಡೆಯುವ ಕಲೆ ತಿಳಿದಿರಲಿಲ್ಲ ಅಂತ ಕಾಣುತ್ತೆ. ಸಾಮಾನ್ಯವಾಗಿ ಗುಂಡು ಹಾಕಿದಾಗ ಜೋಷ್ ಹೆಚ್ಚಾಗುತ್ತದೆ. ಪೌರುಷವೂ ಗರಿಗೆದರುತ್ತದೆ. ಆವಾಗ ನಾನಾ ಬಗೆಯ ಸಾಹಸಕ್ಕೆ ಕೈಹಾಕಲು ಮನಸ್ಸು ತುಡಿಯುತ್ತದೆ. ಈ ಆಸಾಮಿಯ ವಿಷಯದಲ್ಲಿ ಕುಡಿದಿದ್ದು ಹೆಚ್ಚಾಯಿತೋ ಅಥವಾ ಉತ್ಸಾಹ ಅದಕ್ಕೂ ಹೆಚ್ಚಾಯಿತೋ ಗೊತ್ತಾಗಲಿಲ್ಲ. ಕುಡಿದು ವಾಹನ ಚಾಲನೆ ಮಾಡಬೇಡಿ ಎಂದು ಪೊಲೀಸರು ಎಚ್ಚರಿಕೆ ಕೊಡುತ್ತಾರೆ. ಹಾಗೆ ಮಾಡಿದರೆ ಫೈನ್ ಕೂಡ ಹಾಕುತ್ತಾರೆ. 'ಮದ್ಯಪಾನ: ಅಪಘಾತಕ್ಕೆ ಆಹ್ವಾನ' ಇತ್ಯಾದಿ ಘೋಷಣೆಗಳನ್ನು ಬರೆದಿರುತ್ತಾರೆ. ಆದರೆ 'ಗುಂಡು ಹಾಕಿ ಗುಂಡು ಹೊಡೆಯಬೇಡಿ' ಎಂಬ ಭಿತ್ತಿಫಲಕವಾಗಲೀ, ಎಚ್ಚರಿಕೆಯಾಗಲೀ ಇಲ್ಲವಲ್ಲ. ಇನ್ನುಮೇಲೆ ಇದಕ್ಕೂ ಏನಾದರೂ ವ್ಯವಸ್ಥೆ ಮಾಡಬೇಕಾಗಬಹುದೇನೊ. 'ಗುಂಡಿನ ಮತ್ತೇ ಗಮ್ಮತ್ತು, ಅಳತೆ ಮೀರಿದರೆ ಆಪತ್ತು' ಎಂದು ಅವತ್ತೇ ಹಾಡಿದ್ದಾರೆ. ಆದರೆ ಇಂಥ ಆಪತ್ತು ಸಂಭವಿಸುತ್ತೆ ಎಂದು ಯಾರೂ ಅಂದುಕೊಂಡಿರಲಿಕ್ಕಿಲ್ಲ. ಗಂಡ ಹೆಂಡತಿ ನಡುವೆ ಗಂಡಾಗುಂಡಿ ನಡೆಯುತ್ತಿರುತ್ತದೆ. ಆದರೆ ಈ ರೀತಿಯ ಗುಂಡಾಗುಂಡು ನಡೆಯುತ್ತಿರುವುದು ಇದೇ ಮೊದಲಿರಬೇಕು. ಆದರೆ ಒಂದಂತೂ ನಿಜ. ಸಾಮಾನ್ಯ ಸಂದರ್ಭದಲ್ಲಿ ಈ ಭೂಪನಿಗೆ ಗುಂಡು ಹಾರಿಸುವಷ್ಟು ಗುಂಡಿಗೆ ಇರಲಾರದು. ಎಲ್ಲಾ ಗುಂಡಿನ ಮಹಿಮೆ ಅಷ್ಟೇ.

ಸಂಪಾದಕರ ಸದ್ಯಶೋಧನೆ

ರಾಜಕಾರಣದಲ್ಲಿ ಸಂಬಂಧ

ರಾಜಕಾರಣದಲ್ಲಿ ಸಂಬಂಧಗಳು ಬಹಳ ಬೇಗ ಬದಲಾಗುತ್ತದೆ. ಸ್ನೇಹ ಶಾಶ್ವತವಾಗಿ ಇರುವುದಿಲ್ಲ. ಹಾಗಂತ ವೈರತ್ವವೂ ಬಹಳ ದಿನ ಇರುವುದಿಲ್ಲ. ಸಂಬಂಧಗಳು ಕಾಲಕಾಲಕ್ಕೆ ಪಲ್ಲಟವಾಗುತ್ತಲೇ ಇರುತ್ತವೆ. ಜವಾಹರಲಾಲ್ ನೆಹರು ಅವರಿಗೆ ವಿ.ಕೆ.ಕೃಷ್ಣ ಮೆನನ್ ಆತ್ಮೀಯರಾಗಿದ್ದರು. ನೆಹರು ನಂತರ ಭಾರತದಲ್ಲಿ ಎರಡನೆಯ ಅತ್ಯಂತ ಪ್ರಭಾವಿ ವ್ಯಕ್ತಿ ಎಂದೂ ಅವರು ಕರೆಯಿಸಿಕೊಂಡಿದ್ದರು. ನೆಹರು ಸಂಪುಟದಲ್ಲಿ ರಕ್ಷಣಾ ಸಚಿವರಾಗಿದ್ದ ಅವರು, ಕೆಲ ಕಾಲ ಖಾತೆಯಿಲ್ಲದ ಮಂತ್ರಿಯೂ ಆಗಿದ್ದರೆನ್ನಿ. ನೆಹರು ನಂತರ ಅವರ ಮಗಳಾದ ಇಂದಿರಾ ಗಾಂಧಿ ಜತೆ ಅವರ ಸಂಬಂಧ ಚೆನ್ನಾಗಿಯೇ ಇತ್ತು. ಆದರೆ ಇಂದಿರಾಗೆ ಮೆನನ್ ಬಗ್ಗೆ ಯಾರೋ ಚಾಡಿ ಹೇಳಿದರು. ಮೆನನ್ ಅವರನ್ನು ಇಂದಿರಾ ಮೆಲ್ಲಗೆ ದೂರ ಸರಿಸಲಾರಂಭಿಸಿದರು. ಅದು ಮೆನನ್ ಅನುಭವಕ್ಕೂ ಬಂದಿತು. 1967ರ ಲೋಕಸಭಾ ಚುನಾವಣೆ ಬಂದಿತು. ಕಾಂಗ್ರೆಸ್ ಪಕ್ಷ ಅವರಿಗೆ ಈಶಾನ್ಯ ಮುಂಬೈ ಕ್ಷೇತ್ರದಿಂದ ಟಿಕೆಟ್ ನಿರಾಕರಿಸಿತು. ಇದನ್ನು ಮೆನನ್ ಕನಸು ಮನಸಿನಲ್ಲೂ ನಿರೀಕ್ಷಿಸಿರಲಿಲ್ಲ. ಬೇರೆ ದಾರಿಯಿರಲಿಲ್ಲ. ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದರು. ಕಾಂಗ್ರೆಸ್ ಪಕ್ಷ ನಿವೃತ್ತ ಐಸಿಎಸ್ ಅಧಿಕಾರಿ ಎಸ್.ಜಿ.ಬಾರ್ವೆಗೆ ಟಿಕೆಟ್ ನೀಡಿತು. ಅವರಿಗೆ ಜನಸಾಮಾನ್ಯರ ಸಂಪರ್ಕವೇ ಇರಲಿಲ್ಲ. ಮೆನನ್‌ಗೆ ಸರಿಸಾಟಿಯಾಗಿ ಇಂಗ್ಲಿಷ್ ಮಾತಾಡುತ್ತಾರೆಂಬ ಕಾರಣಕ್ಕೆ ಬಾರ್ವೆಗೆ ಟಿಕೆಟ್ ನೀಡಿತ್ತು. ತಾವು ನೆಹರುಗೆ ಎಷ್ಟು ಹತ್ತಿರದವನಾಗಿದ್ದೆ ಎಂಬುದೇ ಮೆನನ್ ಪ್ರಚಾರದ ಪ್ರಮುಖ ಅಂಶವಾಗಿತ್ತು. ಅವರ ಪೋಸ್ಟರುಗಳಲ್ಲಿ, Nehru's Vision, Menon's Mission ಘೋಷವಾಕ್ಯವಾಗಿತ್ತು. ನೆಹರು ನೆರಳಿನ ಮುಂದೆ ಮೆನನ್ ಫೋಟೋ. ಅದೇನೇ ಆಗಲಿ, ಮೆನನ್ ಸೋಲಲೇಬೇಕು ಎಂದು ಇಂದಿರಾ ಪಣ ತೊಟ್ಟಿದ್ದರು. ಶಿವ ಸೇನೆ ಮುಖ್ಯಸ್ಥ ಬಾಳ ಠಾಕ್ರೆ, ಜತೆಗಿನ ವಿರೋಧವನ್ನು ಬದಿಗೊತ್ತಿ ಇಂದಿರಾ ಗಾಂಧಿ ಸ್ವತಃ ಅವರಿಗೆ (ಠಾಕ್ರೆ) ಫೋನ್ ಮಾಡಿ ಬಾರ್ವೆಯನ್ನು ಬೆಂಬಲಿಸುವಂತೆ ವಿನಂತಿ ಮಾಡಿಕೊಂಡರು. ಠಾಕ್ರೆ, ಏಕಾಏಕಿ ಕ್ರಿಯಾಶೀಲರಾದರು. ಕಾಂಗ್ರೆಸ್ಸಿಗೆ ತಮ್ಮ ಬೆಂಬಲವನ್ನು ಪ್ರಕಟಿಸಿದರು. ತಮ್ಮ ಪತ್ರಿಕೆ (ಮಾರ್ಮಿಕ್)ಯಲ್ಲೂ ಮೆನನ್ ವಿರುದ್ಧ ಸ್ವತಃ ವ್ಯಂಗ್ಯಚಿತ್ರಗಳನ್ನು ಬಿಡಿಸಿದರು. ಆ ಚುನಾವಣೆಯಲ್ಲಿ ಮೆನನ್ ಹದಿಮೂರು ಸಾವಿರ ಅಂತರಗಳಿಂದ ಸೋತು ಹೋದರು. ಫಲಿತಾಂಶ ಬಂದ ಕೆಲ ದಿನಗಳಲ್ಲೇ ಬಾರ್ವೆ ನಿಧನರಾದರು. ಮರು ಚುನಾವಣಾ ಘೋಷಣೆಯಾಯಿತು. ಕಾಂಗ್ರೆಸ್ ಬಾರ್ವೆ ಅವರ ಸಹೋದರಿ ತಾರಾ ಸಪ್ರೆ ಅವರನ್ನು ಕಣಕ್ಕಿಳಿಸಿತು. ಆಗ ಮೆನನ್ ಹದಿನೈದು ಸಾವಿರ ಮತಗಳ ಅಂತರದಿಂದ ಸೋತು ಹೋದರು. ಇದು ಮೆನನ್ ಅವರಿಗಾದ ತೀವ್ರ ಮುಖಭಂಗ. ಎಂಟು ತಿಂಗಳ ಅವಧಿಯಲ್ಲಿ ಎರಡು ಸೋಲನ್ನು ಅನುಭವಿಸಿದ್ದರು. ಈ ಮಧ್ಯೆ ಇಂದಿರಾ ಜತೆ ಸಂಬಂಧವನ್ನು ಸುಧಾರಿಸಿಕೊಳ್ಳಲು ಪ್ರಯತ್ನಿಸಿದರು. ಇಂದಿರಾಗೆ ಮೊದಲಿದ್ದ ಸಿಟ್ಟು ತುಸು ತಣ್ಣಗಾಗಿತ್ತು. ಅದಾದ ಎರಡು ವರ್ಷಗಳ ನಂತರ, 1969ರ ಲೋಕಸಭಾ ಮರು ಚುನಾವಣೆಯಲ್ಲಿ ಪಶ್ಚಿಮ ಬಂಗಾಳದ ಮಿಡ್ನಾಪುರ (ಮೇದಿನಿಪುರ) ದಿಂದ ಪಕ್ಷೇತರರಾಗಿಯೇ ಸೆಣಸಿದರು. ಒಂದು ಲಕ್ಷ ಮತಗಳ ಅಂತರದಿಂದ ಆರಿಸಿ ಬಂದರು. ಇಂದಿರಾ ಸೂಚನೆ ಮೇರೆಗೆ ಕಾಂಗ್ರೆಸ್ ಕಾರ್ಯಕರ್ತರು ಮೆನನ್ ಪರವಾಗಿ ಕೆಲಸ ಮಾಡಿದ್ದರು. ಅದಾಗಿ ಎರಡು ವರ್ಷಗಳ ನಂತರ, 1971ರಲ್ಲಿ ತಮ್ಮ ತವರು ರಾಜ್ಯವಾದ ಕೇರಳದ ತಿರುವನಂತಪುರದಿಂದ ಪಕ್ಷೇತರರಾಗಿ ಸ್ಪರ್ಧಿಸಿ, ಪ್ರಜಾ ಸೋಷಿಯಲಿಸ್ಟ್ ಪಕ್ಷದ ದಾಮೋದರಂ ಪೊಟ್ಟಿ ವಿರುದ್ಧ ಇಪ್ಪತ್ನಾಲ್ಕು ಸಾವಿರ ಮತಗಳ ಅಂತರದಿಂದ ಗೆದ್ದರು. ಅಷ್ಟೊತ್ತಿಗೆ ಇಂದಿರಾ ಜತೆ ಸಂಬಂಧ ಸುಧಾರಿಸಿತ್ತು. ಅದಾಗಿ ಮೂರು ವರ್ಷಗಳ ನಂತರ ಅವರು ನಿಧನರಾದರು.

ಮಾಯಾನಗರಿ ದುಬೈಗಿಂತ ದೊಡ್ಡ ಸಾಧನೆ ಬೇಕಾ?

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್

vbhat@me.com

ರಿಚರ್ಡ್ ಬ್ರಾನ್ಸನ್ ಕನಸುಗಳನ್ನು ಬೆನ್ನತ್ತಿ ಹೋದವನು. ಒಂದೊಂದೇ ಕನಸನ್ನು ಹಿಡಿದು ಮಾತಾಡಿಸಿ, ಅದನ್ನು ಒಲಿಸಿಕೊಂಡು ಸಾಕಾರ ಮಾಡಿದವನು. ಹೊಸ ಹೊಸ ಸವಾಲುಗಳಿಗೆ ಮುಖಾಮುಖಿಯಾದವನು. ಅಸಾಧ್ಯವೆನಿಸುವುದೆಲ್ಲವನ್ನೂ ಸಾಧ್ಯ ಮಾಡಿ ತೋರಿಸಿದವನು. ಅಂದುಕೊಂಡಿದ್ದೆಲ್ಲವನ್ನೂ ಮಾಡಿದ ಬಳಿಕ ಇನ್ನು ಸುಮ್ಮನಿರಬೇಕಲ್ಲ ಎಂದು ಚಡಪಡಿಸಿ ತನಗೆ ತಾನೇ ಹೊಸ ಸವಾಲುಗಳನ್ನು ಎಳೆದುಕೊಂಡು ಅವುಗಳನ್ನು ಈಡೇರಿಸಲು ಎದೆಯೊಡ್ಡುತ್ತಿರುವ ಪರಮ ಹುಂಬ, ಮಹಾಸಾಹಸಿ. ಹಣ ಮಾಡುವುದನ್ನೇ ಕಾಯಕ ಮಾಡಿಕೊಳ್ಳದೇ, ಜೀವನವನ್ನು ಇಡಿಯಾಗಿ ಅನುಭವಿಸುವ ಅದಮ್ಯ ಉತ್ಸಾಹಿ.

ನನಗೆ ಅವನೊಬ್ಬ ಉದ್ಯಮಿ, ಶ್ರೀಮಂತನಷ್ಟೇ ಆಗಿದ್ದರೆ ಖಂಡಿತವಾಗಿಯೂ ಇಷ್ಟವಾಗುತ್ತಿರಲಿಲ್ಲ. ಶ್ರೀಮಂತ ಎಂಬ ಕಾರಣಕ್ಕೆ ನೀವು ಅಶೋಕ ಖೇಣಿ, ಮಿತ್ತಲ್, ಅಂಬಾನಿಯನ್ನು ಇಷ್ಟಪಡಲು ಸಾಧ್ಯವೇ ಇಲ್ಲ. ಇದೇ ಕಾರಣವಾಗಿದ್ದರೆ ನಮ್ಮೂರಿನ ಗಿರವಿ ಅಂಗಡಿ ಮಾಲೀಕರು, ಸೇಠುಗಳು, ರಿಯಲ್ ಎಸ್ಟೇಟು ದಂಧೆಕೋರರನ್ನೆಲ್ಲ ಇಷ್ಟಪಡಬೇಕಾಗುತ್ತಿತ್ತು. ಇನ್ನೂ ಒಂದು ಲಕ್ಷ ಕೋಟಿ ರೂಪಾಯಿ ಅವರ ಅಕೌಂಟ್‌ಗೆ ಜಮಾ ಆದರೂ ಮುಖೇಶ್ ಅಂಬಾನಿ ಶಾರ್ಕ್‌ಗಳ ಜತೆ ಈಜಲು ಸಮುದ್ರಕ್ಕಿಳಿಯುವುದಿಲ್ಲ, ಹಾಟ್ ಏರ್ ಬಲೂನ್ನಲ್ಲಿ ಕುಳಿತು ವಿಶ್ವಪ್ರದಕ್ಷಿಣೆಗೆ ಅಣಿಯಾಗುವುದಿಲ್ಲ. ಐವತ್ತು ಸಾವಿರ ಅಡಿ ಎತ್ತರಕ್ಕೆ ಹೋಗಿ ಅಲ್ಲಿಂದ ಜಿಗಿಯುವುದಿಲ್ಲ. ಮಂಗಳಯಾತ್ರೆಗೆ ಬಾಹ್ಯಾಕಾಶ ನೌಕೆಯನ್ನು ಸಿದ್ಧಪಡಿಸುವುದಿಲ್ಲ.

ಕೋಟಿಗೆ ಕೋಟಿ ಸೇರುತ್ತಾ ಹೋದಂತೆಲ್ಲ ಅಂಬಾನಿಯಂಥವರು ಮನೆಯಲ್ಲಿದ್ದು ಅದನ್ನು ಕಾಪಾಡಿಕೊಳ್ಳುವುದು ಹೇಗೆ ಎಂದು ಯೋಚಿಸುತ್ತಾ ದೇಹವನ್ನು ಗುಡಾಣ ಮಾಡಿಕೊಳ್ಳುತ್ತಾರೆಯೇ ಶಿವಾಯ್, ಬ್ರಾನ್ಸನ್ನಂಥ ಸಾಹಸಕ್ಕೆ ಅಣಿಯಾಗುವುದಿಲ್ಲ. ಬ್ರಾನ್ಸನ್ ಇಷ್ಟವಾಗುವುದು ಆ ಕಾರಣಕ್ಕೆ. ಓದುಗರೇನಾದರೂ ಅವನನ್ನು ಮೆಚ್ಚಿದರೂ ಅದೇ ಕಾರಣಕ್ಕೆ. ಜತೆಗೆ ಅವನ ವಿಚಾರಗಳು. ನನಗೆ ರಿಚರ್ಡ್ ಬ್ರಾನ್ಸನ್ನಂತೆ ಅಥವಾ ಅವನಿಗಿಂತ ಒಂದು ಹಿಡಿ ಜಾಸ್ತಿಯಾಗಿ ಕಂಡವನು ದುಬೈ ರೂಲರ್ ಮಹಮ್ಮದ್ ಬಿನ್ ರಶೀದ್ ಅಲ್ ಮಕ್ತೌಮ್. ಬ್ರಾನ್ಸನ್ನಂತೆ ಮಕ್ತೌಮ್ ಮುಂದೆ ಸಹ ಸಾಧನೆಯ ಸಾಗರವಿದೆ. ಮಾಯಾನಗರಿ ದುಬೈಗಿಂತ ದೊಡ್ಡ ಸಾಧನೆ ಬೇಕಾ? ಮರುಭೂಮಿಯನ್ನು ಮರುಳು ಮಾಡುವ ಭೂಮಿಯನ್ನಾಗಿ ಪರಿವರ್ತಿಸುವ ಹಿಂದಿನ ಶ್ರಮ, ಶ್ರದ್ಧೆ, ಯೋಚನೆ, ಚಿಂತನೆ, ಕತೃತ್ವದ ಶಕ್ತಿಯಿದೆಯೆಲ್ಲ, ಅದಕ್ಕೆ ಎಂಥವರಾದರೂ ಬೆರಗಾಗಲೇಬೇಕು, ತಲೆದೂಗಲೇಬೇಕು.

ದುಬೈ ನಗರವನ್ನು ನೋಡಿದಾಗೆಲ್ಲ ಅದನ್ನು ರೂಪಿಸಿದ ವ್ಯಕ್ತಿಯ ಆಲೋಚನೆಗಳು, ಕನಸುಗಳು ಹೇಗಿದ್ದಿರಬಹುದು, ಯಾವ ಮಹಾನ್ ಶಕ್ತಿ ಈ ನಗರದ ಬೀಜ ಬಿತ್ತಿರಬಹುದು ಎಂಬ ವಿಸ್ಮಯ ವುಂಟಾಗುತ್ತಿತ್ತು. ಮಕ್ತೌಮ್ ಎಂಬ ಕನಸುಗಾರನ ವಿಚಾರ, ಧ್ಯೇಯ, ಸಿದ್ಧಾಂತಗಳನ್ನು ಓದುತ್ತಾ ಹೋದಂತೆಲ್ಲಾ ನಾನು ಅವರಲ್ಲಿ ಮತ್ತೊಬ್ಬ ಬ್ರಾನ್ಸನ್ನನ್ನು ಕಾಣಲಾರಂಭಿಸಿದೆ. ರೋಮ್ ನಗರವನ್ನು ರಾತ್ರಿ - ಬೆಳಗಾಗುವುದರೊಳಗೆ ಕಟ್ಟಿಲ್ಲವಂತೆ. ಆದರೆ ರೋಮ್ ನಗರ ಈ ಸ್ಥಿತಿಗೆ ಬರಲು ತೆಗೆದುಕೊಂಡಿರುವ ಅವಧಿಯನ್ನು ಹೋಲಿಸಿದರೆ, ದುಬೈ ನಗರವನ್ನು ರಾತ್ರಿ - ಬೆಳಗಾಗುವುದರೊಳಗೆ ಕಟ್ಟಿದ್ದಾರೆಂದು ಹೇಳಬಹುದು. ಇಡೀ ಜಗತ್ತೇ ತಲೆದೂಗುವ ರೀತಿಯಲ್ಲಿ ತಲೆಯೆತ್ತಿ ನಿಲ್ಲುವಂತೆ ಮಾಡಿದ ಈ ನಗರದ ಕನಸಿನ ಮೊಟ್ಟೆಗೆ ಕಾವು ಕೊಟ್ಟು ಮರಿ ಮಾಡಿ, ಅದನ್ನು ಈ ಸ್ಥಿತಿಗೆ ತರುವ ತನಕ ಹಣಗಿದ ಮನಸ್ಸು ಹೇಗೆ ಕೆಲಸ ಮಾಡಿರಬಹುದು ಎಂಬುದು ಎಂಥವರಿಗಾದರೂ ಅಚ್ಚರಿಯೇ. ಮಕ್ತೌಮ್ ಇಷ್ಟವಾಗುವುದು ಈ ಕಾರಣಕ್ಕೆ.

ಕಳೆದ ವರ್ಷದ ಆರಂಭದಲ್ಲಿ ಮಕ್ತೌಮ್ ಅವರು ಸರಕಾರಿ ಅಧಿಕಾರಿಗಳ ಶೃಂಗ ಸಭೆಯನ್ನು ಏರ್ಪಡಿಸಿದ್ದರು. ಅಲ್ಲಿ ಅವರು ಮಾಡಿದ ಭಾಷಣದ ಸಿಡಿಯನ್ನು ಮಕ್ತೌಮ್ ಅವರ ಆಪ್ತರೊಬ್ಬರು ನನಗೆ ಕಳಿಸಿಕೊಟ್ಟಿದ್ದರು. ಸುಮಾರು ಮುಕ್ಕಾಲು ಗಂಟೆ ಅವಧಿಯ ಅವರ ಭಾಷಣವನ್ನು ಇತ್ತೀಚೆಗೆ ಕೇಳುತ್ತಿದ್ದೆ, ನೋಡುತ್ತಿದ್ದೆ. ಪ್ರಪ್ರಥಮವಾಗಿ ಸರಕಾರಿ ಸಿಬ್ಬಂದಿ, ಅಧಿಕಾರಿಗಳನ್ನು ಕರೆದು ಅವರಿಗಾಗಿ ಶೃಂಗಸಭೆ ಏರ್ಪಡಿಸುವುದು, ಅವರಿಂದ ಅಪೇಕ್ಷೆಗಳೇನು, ನಿರೀಕ್ಷೆಗಳೇನು ಎಂದು ಬಯಸುವುದು, ಅವರ ಸಮಸ್ಯೆಗಳಿಗೆ ಕಿವಿಯಾಗುವುದು, ಅವರನ್ನು ಹುರಿದುಂಬಿಸುವುದಿದೆಯಲ್ಲ, ಅದೇ ಒಂದು ಅದ್ಭುತ!

ನಮ್ಮ ಯಾವ ಮುಖ್ಯಮಂತ್ರಿ ಸರಕಾರಿ ನೌಕರರನ್ನು ಭೇಟಿ ಮಾಡಿ, ಅವರಿಂದ ಏನು ನಿರೀಕ್ಷಿಸುತ್ತೇನೆ ಎಂದು ಕೇಳಿದ್ದಾರೆ? ಅವರಿಗೆ ಪ್ರೇರಣಾದಾಯಕ ಮಾತುಗಳನ್ನು ಹೇಳಿ ಹುರಿದುಂಬಿಸಿದ್ದಾರೆ? ಆ ಸರಕಾರಿ ಶೃಂಗಸಭೆಯಲ್ಲಿ ಸಾಮಾನ್ಯ ಸಿಬ್ಬಂದಿಯೊಬ್ಬ ಎದ್ದುನಿಂತು, ನೀವು ನಮ್ಮಿಂದ ಏನನ್ನು ನಿರೀಕ್ಷಿಸುತ್ತೀರಿ? ನಿಮ್ಮ ಹಕೀಕತ್ತೇನು?' ಎಂದು ಪ್ರಶ್ನಿಸಿದ.

ಅದಕ್ಕೆ ಮಕ್ತೌಮ್ ಹೇಳಿದರು – ನೀವು ದುಬೈ ರಾಯಭಾರಿಗಳು. ನಿಮ್ಮ ಯೋಗದಾನವಿಲ್ಲದೇ ಈ ಸುಂದರ, ವೈಭವದ ನಗರವನ್ನು ಈ ಮಟ್ಟಕ್ಕೆ ಬೆಳೆಸಲು ಸಾಧ್ಯವಾಗುತ್ತಿರಲಿಲ್ಲ. ನೀವು ಅಭಿವೃದ್ಧಿಯ ಚಾಲಕರು. ನೀವು ನಮ್ಮ ಬಂಡವಾಳ. ನಾವು ಜನರಿಗೆ ನೀಡುವ ಸೇವೆಯನ್ನು ಅವರಿಗೆ ತಲುಪಿಸುವವರೇ ನೀವು. ದುಬೈ ನಗರ world class ಆಗಿದೆ. ನಮ್ಮ ಸರಕಾರಿ ನೌಕರರ ಕೆಲಸದ ಮೌಲ್ಯವೂ world class ಆಗಿದೆ ಎಂದರ್ಥ.'

'ನಮಗೆ ಬೇಕಾಗಿರುವವರು ಉತ್ಕೃಷ್ಟ, ಪರಿಪೂರ್ಣ ಕೆಲಸಗಾರರು, ಕೈಗೆತ್ತಿಕೊಂಡ ಕೆಲಸದಲ್ಲಿ ಶ್ರೇಷ್ಠತೆ ಮೆರೆಯುವವರು. ಅ great vision can only be achieved by a great team. ಹಿಂದಿನ ವರ್ಷವೊಂದೇ ನಮ್ಮ 55 ಸಾವಿರ ಸರಕಾರಿ ಸಿಬ್ಬಂದಿ ತರಬೇತಿಗಾಗಿ ಹದಿಮೂರು ಲಕ್ಷ ಗಂಟೆಗಳ ಬಂಡವಾಳ ಹೂಡಿದ್ದೇವೆ. ನೀವೇ ನಮಗೆ capital (ಬಂಡವಾಳ). ನೀವು ಜೀವನದಲ್ಲಿ ಮುಂದೆ ಬನ್ನಿ. ದುಬೈ ತನ್ನಿಂದ ತಾನೆ ಮುಂದೆ ಬರುತ್ತದೆ. ನೀವು ಕೊಡುವ ಸಾಮರ್ಥ್ಯ ಹೊಂದಿದರೆ ಮಾತ್ರ ದೇಶ ಉದ್ಧಾರವಾಗುತ್ತದೆ.' ಅಂದು ಮಕ್ತೌಮ್ ಹೇಳಿದ ಕೆಲವು ವಿಚಾರಗಳನ್ನು ನಿಮಗೆ ಕೇಳಿಸಬೇಕು. ಒಂದು ದೇಶವನ್ನು ಮುನ್ನಡೆಸುವವರು ಹೇಗೆ ಯೋಚಿಸುತ್ತಿದ್ದಾರೆಂಬುದು ಗೊತ್ತಾದೀತು.

- ಸರಕಾರಿ ನೌಕರರಾದ ನೀವು ಕಾರಕೂನರಲ್ಲ, ಹೇಳಿದ್ದಷ್ಟನ್ನೇ ಮಾಡಿ ಹೋಗುವ ಗುಮಾಸ್ತರಲ್ಲ, ನೀವು ನಿಮಗೆ ಒಪ್ಪಿಸಿದ ರಂಗದಲ್ಲಿ ಲೀಡರ್ ಎಂದು ಭಾವಿಸಿ True leadership is not in one's way of thinking. ನಿಜವಾದ ನಾಯಕನಾದವನು ತನ್ನ ಹುದ್ದೆ, ಸ್ಥಾನಮಾನದಿಂದ ಅಧಿಕಾರವನ್ನು ಪಡೆಯುವುದಿಲ್ಲ. ಆದರೆ ತನ್ನ ಜ್ಞಾನ, ವಿವೇಕ, ಜನರ ಪ್ರೀತಿ, ವೈಯಕ್ತಿಕ ವರ್ಚಸ್ಸು, ಶಿಕ್ಷಣ, ಅರ್ಹತೆಯಿಂದ ಅದನ್ನು ಪಡೆಯುತ್ತಾನೆ. ಸರಕಾರಿ ನೌಕರರೇ, ನೀವೆಲ್ಲ ನಾಯಕರು. ಆದ್ದರಿಂದ ನಿಮ್ಮೆಲ್ಲರಿಗೂ ನಿರೀಕ್ಷೆಗಳನ್ನು ಮುಟ್ಟುವ ಸಾಮರ್ಥ್ಯವಿದೆ.
- ಸರಕಾರಿ ನೌಕರಿಯನ್ನು ನೌಕರಿ ಎಂದು ಭಾವಿಸಿದರೆ, ನೀವು ಚಾಕರಿ ಮಾಡಿ ಎದ್ದು ಹೋಗುತ್ತೀರಿ. ಅದನ್ನು ಮಾಡಲು ನೀವೇ ಬೇಕು ಎಂದಿಲ್ಲ. ಯಾರು ಬೇಕಾದರೂ ಮಾಡುತ್ತಾರೆ. ಆದರೆ ನೀವು ನೌಕರರಲ್ಲ. ನಾಯಕರು. ಅಂದರೆ ನೀವು ಚಾಕರಿ ಮಾಡುತ್ತಿಲ್ಲ. ನಿಮ್ಮ ಸಾಮರ್ಥ್ಯ, ಜಾಣ್ಮೆ, ಕೌಶಲವನ್ನು ಪ್ರದರ್ಶಿಸಲು ಸಿಕ್ಕಿದ ಅಪೂರ್ವ ಅವಕಾಶ ಎಂದು ಭಾವಿಸಿ. ಅಲ್ಲದೇ ನಿಮ್ಮ ದೇಶದ ಇತಿಹಾಸವನ್ನು ನಿರ್ಮಿಸಲು ನಿಮಗೆ ಪ್ರಾಪ್ತವಾದ ಅದ್ಭುತ ಅವಕಾಶ ಎಂದು ಭಾವಿಸಿ. ಈ ಗುಂಗಿನಲ್ಲಿ ಕೆಲಸ ಮಾಡಿ.
- ಚಾಕರಿ ಮಾಡುವವರು ಬಿಕಾರಿಗಳು. ಅದಕ್ಕೆ ಯಾವ ಪರಿಣತಿಯೂ ಬೇಡ. ನೀವೊಬ್ಬ ಸುಂದರ ಪೇಂಟಿಂಗ್ ಬಿಡಿಸುವ ಕ್ಯಾನ್ವಾಸ್ ಮುಂದಿರುವ ಕಲಾವಿದ ಎಂದು ತಿಳಿಯಿರಿ. ನಿಮ್ಮನ್ನು ಇದಕ್ಕಿಂತ ಕಡಿಮೆ ಎಂದು ನಾನಂತೂ ತಿಳಿದಿಲ್ಲ.
- ದೈನಂದಿನ ಕೆಲಸ – ಕಾರ್ಯಗಳ ನಡುವೆ ನಿಮ್ಮ ಸಾಮರ್ಥ್ಯವನ್ನು ಸತತ ಹೆಚ್ಚಿಸಿಕೊಳ್ಳಿ. ನೀವು ಹೆಚ್ಚು ಹೆಚ್ಚು ಜ್ಞಾನವನ್ನು ಸಂಪಾದಿಸಿಕೊಳ್ಳಿ. ನಿಮ್ಮ ನೋಟವನ್ನು ವಿಸ್ತರಿಸಿಕೊಳ್ಳಿ. ಪರಿಶ್ರಮ, ಸಂಯಮ, ಸಮಚಿತ್ತ ಸದಾ ನಿಮ್ಮನ್ನು ಮುನ್ನಡೆಸುವ ವಾಹಕಗಳಾಗಲಿ.
- ನಮ್ಮ ದೇಶದ ವಿಷಯದಲ್ಲಿ ಪ್ರಥಮ ಸ್ಥಾನದ ಹೊರತಾಗಿ ನಮಗೆ ಮತ್ಯಾವ ಸ್ಥಾನ ಸಿಕ್ಕರೂ ನಾವು ಸಂತೃಪ್ತರಾಗುವುದು ಬೇಡ. ಸದಾ ಉತ್ಕೃಷ್ಟತೆಗಾಗಿ ಚಡಪಡಿಸೋಣ. ನಿಮ್ಮ ಪ್ರತಿ ಪ್ರಯತ್ನ, ಕೆಲಸ ದೇಶವನ್ನು ನಂಬರ್ ಒನ್ ಮಾಡುವ ದಿಕ್ಕಿನಲ್ಲಿ ಪೂರಕವಾಗಿರಲಿ.
- ಕೆಲವರು ನನ್ನ ಮುಂದೆ ಬಂದು ಈ ಕೆಲಸ ಮಾಡಲು ಸಾಧ್ಯವಿಲ್ಲ' ಅಂತಾರೆ. ನಾನು ಹಿಂದೆ ಮುಂದೆ ನೋಡದೇ ಸಾಧ್ಯವಿದೆ, ಸಾಧ್ಯವಿದೆ' ಎಂದು ಹೇಳುತ್ತೇನೆ. ಕಾರಣ ಅಸಾಧ್ಯವಾದುದು ಯಾವುದೂ ಇಲ್ಲ ಎಂಬುದು ನನಗೆ ಒಂದಲ್ಲ, ಹತ್ತಲ್ಲ, ನೂರಾರು ಸಲ ಮನವರಿಕೆಯಾಗಿದೆ. ಹೀಗಾಗಿ ಯಾರೇ ಬಂದು ಆಗೊಲ್ಲ' ಅಂದ್ರೆ ಆಗುತ್ತದೆ' ಅಂತೇನೆ. ಸಾಧ್ಯ ಮಾಡಿ ತೋರಿಸುತ್ತೇನೆ. ಹೀಗಾಗಿ ಯಾರೂ ನನ್ನ ಬಳಿ ಬಂದು 'ಇಂಪಾಸಿಬಲ್' ಎಂಬ ಪದ ಬಳಸುವುದಿಲ್ಲ. It's possible but' ಅಂತಾರೆ. ಅರ್ರೆ ಯಾಕೆ? It's possible' ಎಂದಷ್ಟೇ ಹೇಳಿ ಎಂದು ಹೇಳುತ್ತೇನೆ. ಈ ಮಾತನ್ನು ನಾನು ತುಸು ಧಾರ್ಷ್ಟ್ಯದಿಂದಲೇ ಹೇಳುತ್ತಿದ್ದೇನೆ. ಜಗತ್ತಿನಲ್ಲಿಯೇ ಎತ್ತರದ ಕಟ್ಟಡ ಕಟ್ಟಬೇಕೆಂದು ಹೇಳಿದಾಗ ಸಾಧ್ಯವಿಲ್ಲ ಅಂದರು. ನಾವು ದಾಖಲೆ ಅವಧಿಯಲ್ಲಿ ಬುರ್ಜ್ ಖಲೀಫಾ ಕಟ್ಟಿದೆವು. ಇದನ್ನು ಕಟ್ಟುವ ಮೊದಲು ಎಲ್ಲರೂ'ಅದು ಸಾಧ್ಯವಾಗದ ಮಾತು' ಎಂದೇ ಹೇಳಿದ್ದರು. ಹಾಗೆ ಹೇಳಿದವರು ಈಗ ಎಲ್ಲಿ ಇದ್ದಾರೋ ಗೊತ್ತಿಲ್ಲ.
- ನನ್ನ ಮನೆಯ ಹಜಾರದಲ್ಲಿ ಗ್ರಿಫಿನ್ ಎಂಬ ಕಾಲ್ಪನಿಕ ಪಕ್ಷಿಯ ಪೇಂಟಿಂಗ್ ಅನ್ನು ತಗುಲಿ ಹಾಕಿಕೊಂಡಿದ್ದೇನೆ. ಗ್ರೀಕ್ ಪುರಾಣದಲ್ಲಿ ಈ ಪಕ್ಷಿಯ ಪ್ರಸ್ತಾಪವಿದೆ. ಹದ್ದಿನ ಮುಖದ ಸಿಂಹದ ದೇಹದ ಈ ಪಕ್ಷಿ ನಮಗೆ ಅಸಾಧ್ಯವಾದುದನ್ನು ಸಾಧ್ಯಮಾಡುವುದಕ್ಕೆ ನಿರಂತರ ಪ್ರೇರಣೆ ನೀಡುತ್ತದೆ. ಈ ಪಕ್ಷಿಯ ವೈಶಿಷ್ಟ್ಯವೇನೆಂದರೆ, ಇದು ಸದಾ ಆಗಸದಲ್ಲಿ ಹಾರುತ್ತಾ ಇರುತ್ತದೆ. ನೆಲದ ಮೇಲಾಗಲಿ, ಮರದ ಮೇಲಾಗಲಿ ಕುಳಿತುಕೊಳ್ಳುವುದಿಲ್ಲ. ಎಷ್ಟೇ ಹಾರಿದರೂ ಅದಕ್ಕೆ ಸುಸ್ತಾಗುವುದಿಲ್ಲ. ಹಾರುವಾಗಲೇ ಆಕಾಶದಲ್ಲಿ ಮೊಟ್ಟೆಯಿಟ್ಟು, ಅಲ್ಲಿಯೇ ಕಾವು ಕೊಟ್ಟು ಮರಿಗಳನ್ನು ಹಾಕುತ್ತದೆ. ಮರಿಗಳು ಹುಟ್ಟಿದ ತಕ್ಷಣವೇ ಹಾರಲಾರಂಭಿಸುತ್ತವೆ. ನಿಜ ಹೇಳಿ. ಇದು ಸಾಧ್ಯವಾ? ಸಾಧ್ಯವಿಲ್ಲ ತಾನೆ. ಆದರೆ ಇದು ಕಲ್ಪನೆಯಲ್ಲಾದರೂ ಸಾಧ್ಯವಾಗಿದೆಯಲ್ಲ. ಗ್ರಿಫಿನ್ ಪಕ್ಷಿ ನಿಜವಾಗಿಯೂ ಇದ್ದಿರಬಹುದು ಎಂದೆನಿಸುತ್ತದೆ. ನಮ್ಮ ಕಲ್ಪನೆಯನ್ನು ನಿಜಗೊಳಿಸಲು, ಇಂಪಾ ಸಿಬಲ್ಲನ್ನೂ ಪಾಸಿಬಲ್ ಮಾಡಲು ಈ ಪಕ್ಷಿ ಸೃಷ್ಟಿಯಾಗಲಿ ಎಂದು ನಾನು ಯಾವತ್ತೂ ಅಂದುಕೊಳ್ಳುತ್ತೇನೆ.
- ದುಬೈಯಂಥ ಉರಿಬಿಸಿಲ ನಾಡಿನಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಸಾಧ್ಯವೇ ಇಲ್ಲ ಎಂದು ಎಲ್ಲರೂ ಹೇಳುತ್ತಿದ್ದರು. ಒಂದು ವೇಳೆ ಸಾಧ್ಯವಾಗುವಂತಿದ್ದರೆ, ಬೇರೆ ಅರಬ್ ದೇಶಗಳು ಈ ಅವಕಾಶವನ್ನು ತಪ್ಪಿಸಿಕೊಳ್ಳುತ್ತಿರಲಿಲ್ಲ ಎಂದು ಅನೇಕರು ನನ್ನ ಬಳಿ ಹೇಳುತ್ತಿದ್ದರು. ಅವರ ದೃಷ್ಟಿಯಲ್ಲಿ ದುಬೈ ಪ್ರವಾಸಿ ತಾಣವಾಗಲು ಸಾಧ್ಯವೇ ಇಲ್ಲ. ಆದರೆ ಪ್ರತಿ ವರ್ಷ ದುಬೈಗೆ ಒಂದು ಕೋಟಿ ಜನ ಬರುತ್ತಿದ್ದಾರೆ.
- ಸಮುದ್ರದ ಮೇಲೆ ಕಟ್ಟಡ, ಬಡಾವಣೆ ನಿರ್ಮಿಸುವುದು ಸಾಧ್ಯವಾ? ನಾವು ಪಾಮ್ ಐಲ್ಯಾಂಡ್ ಯೋಜನೆಯನ್ನು ಕೈಗೆತ್ತಿಕೊಂಡಾಗ ಎಲ್ಲರೂ ನಮ್ಮ ಉತ್ಸಾಹಕ್ಕೆ ತಣ್ಣೀರೆರಚಿದರು. ಜಗತ್ತಿನಲ್ಲಿ ಎಲ್ಲೂ ಈ ಯೋಜನೆ ಯಶಸ್ವಿಯಾಗಿಲ್ಲ ಎಂದರು. ಅದಕ್ಕೆ ನಾನು ಹೇಳಿದೆ–ಜಗತ್ತಿನಲ್ಲಿ ಯಾರೂ ಇಂಥ ಯೋಜನೆ ಕೈಗೆತ್ತಿಕೊಳ್ಳಲು ಧೈರ್ಯ ಮಾಡಿಲ್ಲ'. ನಾವು ಧೈರ್ಯ ಮಾಡಿದೆವು. ಇಂದು ವಿಶ್ವದಲ್ಲಿಯೇ ಅತಿ ಭವ್ಯ ಮಾನವ ನಿರ್ಮಿತ ದ್ವೀಪವನ್ನು ನಿರ್ಮಿಸಿದ್ದೇವೆ. ಸಾವಿರಾರು ಕಟ್ಟಡಗಳನ್ನು ಕಟ್ಟಿದ್ದೇವೆ. ಲಕ್ಷಾಂತರ ಜನ ಅಲ್ಲಿ ವಾಸಿಸುತ್ತಿದ್ದಾರೆ.
- ಈ ಎಲ್ಲ ಘಟನೆಗಳಿಂದ ನನಗೆ ಒಂದು ಸಂಗತಿ ಸ್ಪಷ್ಟವಾಗಿದೆ. ಅಸಾಧ್ಯವೆಂಬುದು ಯಾವುದೂ ಇಲ್ಲ. ಸರಕಾರಿ ಸಿಬ್ಬಂದಿಯಾಗಿ, ಸರಕಾರಿ ನಾಯಕ'ರಾಗಿ ನಿಮ್ಮ ಮನಸ್ಸಿನಲ್ಲಿ ಇಂಪಾಸಿಬಲ್ ಎಂಬ ಪದವನ್ನು ನಿಮ್ಮ ಮನಸ್ಸಿನೊಳಗೆ ಬಿಟ್ಟುಕೊಳ್ಳಬೇಡಿ. ಆ ಒಂದು ಶಬ್ದ ನಿಮ್ಮನ್ನು ಕುಬ್ಜರನ್ನಾಗಿ, ದುರ್ಬಲರನ್ನಾಗಿ ಮಾಡುತ್ತದೆ. ಅದಕ್ಕೂ ಮುಖ್ಯವಾಗಿ ದುರ್ಬಲ ಹಾಗೂ ಸಬಲ ಎಂಬುದೂ ಇಲ್ಲ. ಒಂದು ಕಾರ್ಯವನ್ನು ಕೈಗೆತ್ತಿಕೊಳ್ಳಲು ಮನಸ್ಸಿದೆಯಾ ಅಥವಾ ಇಲ್ಲವಾ ಎಂಬುದಷ್ಟೇ ಪರಿಗಣಿತವಾಗುತ್ತದೆ.
- ನಾವು ಯೋಚಿಸುವ, ಗ್ರಹಿಸುವ ಕೆಲಸ ಮಾಡುವ ವಿಧಾನ ಕ್ಷಿಪ್ರ ಬದಲಾಗುತ್ತಿದೆ. ಅದೇ ರೀತಿ ಸರಕಾರದ ಕಲ್ಪನೆಯೂ ಬದಲಾಗುತ್ತಿದೆ. ಬೆಳಗ್ಗೆ ಹತ್ತರಿಂದ ಸಾಯಂಕಾಲ ಆರರ ತನಕ ಕೆಲಸ ಮಾಡುವುದಷ್ಟೇ ಸರಕಾರ ಅಲ್ಲ. ಖಾಸಗಿ ವಲಯ ವರ್ಷವಿಡೀ 24 /7 ಗಂಟೆ ಕೆಲಸ ಮಾಡುವುದಾದರೆ, ಸರಕಾರಿ ವಲಯವೇಕೆ ನಿರಾಳವಾಗಿರಬೇಕು? ನಮ್ಮ ಸರಕಾರ ನಮ್ಮ ಏರ್‌ಲೈನ್ ರೀತಿ, ದಿನದ ಇಪ್ಪತ್ನಾಲ್ಕು ಗಂಟೆ ಕೆಲಸ ಮಾಡಬೇಕು.
- ನಮ್ಮ ಸರಕಾರ ಹೇಗಿರಬೇಕೆಂದರೆ, ಸಾರ್ವಜನಿಕರು ಖಾಸಗಿ ರಂಗಕ್ಕಿಂತ ಸರಕಾದ ಸೇವೆಯೇ ಉತ್ತಮವಾಗಿದೆ ಎಂದು ಪ್ರಶಂಸಿಸಬೇಕು. ಸರಕಾರಿ ಕಚೇರಿಗೆ ಬರುವ ಸಾರ್ವಜನಿಕರನ್ನು, ಪಂಚತಾರಾ ಹೋಟೆಲ್‌ಗೆ ಬರುವ ಅತಿಥಿಗಳಂತೆ ಸ್ವಾಗತಿಸಲು, ಸೇವೆ ಮಾಡಲು ಏಕೆ ಸಾಧ್ಯವಿಲ್ಲ? ನಾವೂ ಅಂಥ ಸೇವೆಯನ್ನು ನೀಡಬಹುದಲ್ಲ? ಬ್ಯಾಂಕ್‌ಗಳು ಚೆಕ್‌ಗಳನ್ನು ಕ್ಲಿಯರ್ ಮಾಡುವ ರೀತಿಯಲ್ಲಿ ನಮ್ಮ ಸರಕಾರಗಳು ಫೈಲ್‌ಗಳನ್ನು ಕ್ಲಿಯರ್ ಮಾಡುವಂತಾಗಬೇಕು.
- ಇಂದು ಇಡೀ ಜಗತ್ತಿನ ಕಣ್ಣು ದುಬೈ ಮೇಲಿದೆ. ದುಬೈ ಗೆ ಬಂದವರೆಲ್ಲ ಇಲ್ಲಿನ ದೇಶವನ್ನು ನೋಡಿ ಬೆರಗಾಗುತ್ತಾರೆ. ಅಷ್ಟೇ ಇಲ್ಲ ಇಲ್ಲಿಂದ ಪ್ರೇರಣೆ ಪಡೆದು ಹೋಗುತ್ತಾರೆ. ಎಲ್ಲ ದೇಶಗಳ ಮುಖ್ಯಸ್ಥರು ಬಂದಾಗ ನಮ್ಮ ದೇಶವೂ ಹೀಗೆ ಇರಬೇಕೆಂದು ಮನಸ್ಸಿನೊಳಗೆ ಅಂದುಕೊಳ್ಳುತ್ತಾರೆ. ಅನೇಕರು ನನ್ನ ಮುಂದೆಯೇ ಹೇಳಿದ್ದುಂಟು. ಅಂದರೆ ಅವರಿಗೆ ಸಾಧ್ಯವಾಗದ್ದು ನಮಗೆ ಸಾಧ್ಯವಾಗಿದೆ. ಈ ಕಾರಣಗಳಿಂದ ಎಲ್ಲರೂ ನಿಮ್ಮನ್ನು ಬೇರೆ ರೀತಿಯಿಂದ ನೋಡುತ್ತಾರೆ. ನಿಮ್ಮಿಂದ ಹೆಚ್ಚಿನದಾದುದನ್ನು ನಿರೀಕ್ಷಿಸುತ್ತಾರೆ. ಹೀಗಾಗಿ ನಿಮ್ಮ ಕಡೆ ಅಭಿಮಾನದಿಂದ ನೋಡಿದವರಿಗೆ ಯಾವತ್ತೂ ನಿರಾಸೆ ಮಾಡಬೇಡಿ. ನೀವು ಒಬ್ಬ Change Agent ಎಂಬುದನ್ನು ತೋರಿಸಿ ಕೊಡಿ. ನಿಮ್ಮ ಒಂದು ನಡೆ ನಮ್ಮ ದೇಶದ ಬಗೆಗಿನ ಅಭಿಪ್ರಾಯವನ್ನೇ ಬದಲಿಸಬಹುದು.
- ನೀವು ಕಚೇರಿಯಲ್ಲಿ ಇದ್ದಾಗ ಮಾತ್ರ ಸರಕಾರಿ ನೌಕರರಲ್ಲ. ನೀವು ಯಾವತ್ತೂ, ಅಂದರೆ ಕಚೇರಿಯಲ್ಲಿ ಇಲ್ಲದಿದ್ದಾಗಲೂ ನೌಕರರೇ. ದುಬೈ ಯಲ್ಲಿ ಕಾಣುವ ಒಂದು ಲೋಪ ಅದು ನಮ್ಮ ಸಾಂಘಿಕ ಲೋಪ. ಅಂತ ಲೋಪವನ್ನು ನಾವು ಸಹಿಸಿಕೊಳ್ಳಬಾರದು. ಎಲ್ಲಾ ಸರಿ ಇದ್ದು ಯಾವುದೋ ಒಂದು ಸರಿ ಇಲ್ಲದಿದ್ದರೆ, ವ್ಯವಸ್ಥೆ ಪರಿಪೂರ್ಣವಾಗಿಲ್ಲ ಎಂದರ್ಥ. ಈ ನಿಟ್ಟಿನಲ್ಲಿ ನಾವೆಲ್ಲರೂ ಜವಾಬ್ದಾರರು.
- ಪ್ರತಿದಿನ ನಾನು ಬಂದು ನಿಮ್ಮನ್ನು ಹುರಿದುಂಬಿಸಬೇಕು, ಪ್ರೇರಣೆ ನೀಡಬೇಕು ಎಂದು ಭಾವಿಸಬೇಡಿ. ನಿಮ್ಮನ್ನು ಹುರಿದುಂಬಿಸುವವರು ನೀವೇ ಎಂಬುದು ಗೊತ್ತಿರಲಿ. ನಿಮ್ಮ ಕೆಲಸ, ನಡತೆ ನೋಡಿ ಬೇರೆಯವರು ಪ್ರೇರಣೆ ಪಡೆಯುತ್ತಾರೆ. ಹೀಗಾಗಿ ನಮಗೆ ನಾವೇ ಪ್ರೇರಣೆ ಕೊಡುತ್ತಾ, ಪಡೆಯುತ್ತಾ ಇರಬೇಕು. ಆಗಲೇ ನಮ್ಮ ಸುತ್ತಲಿನ ವಾತಾವರಣ ಕ್ರಿಯಾಶೀಲವಾಗಿರುತ್ತದೆ.
- ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುವವರೆಲ್ಲ ಇಂಟರ್‌ನೆಟ್ ಸಂಪರ್ಕ ಹೊಂದಿರುತ್ತಾರೆ. ಸದಾ ಸ್ಮಾರ್ಟ್ ಫೋನ್, ಬ್ಲ್ಯಾಕ್‌ಬೆರಿ ಫೋನ್‌ಗಳ ಮೂಲಕ ಸದಾ ಆಫೀಸಿನೊಂದಿಗೆ connect ಆಗಿರುತ್ತಾರೆ. ಆಫೀಸಿನಲ್ಲಿಯೇ ಇರಬೇಕೆಂದಿಲ್ಲ. ಮನೆಯಿಂದ ಸಹ ಕೆಲಸ ಮಾಡುತ್ತಾರೆ. ಸರಕಾರಿ ನಾಯಕ'ರೂ ಹೀಗೆ ಆಫೀಸಿನಲ್ಲಿ ಇಲ್ಲದಿದ್ದರೂ connect ಆಗಿರಬೇಕು. ಖಾಸಗಿಯವರಿಗೆ ಇದು ಸಾಧ್ಯವಾಗುವುದಾದರೆ, ಸರಕಾರದಲ್ಲಿರುವವರಿಗೆ ಯಾಕೆ ಸಾಧ್ಯವಾಗಬಾರದು?
- ಖಾಸಗಿ ರಂಗದಲ್ಲಿ ಅರ್ಹತೆ, ಶ್ರಮವೇ ಕೆಲಸದಲ್ಲಿ ಮುಂದುವರೆಯುವುದಕ್ಕೆ ಅಳತೆಗೋಲು. ಈ ನಿಯಮ ಸರಕಾರಿ ಸಿಬ್ಬಂದಿಗೂ ಅನ್ವಯವಾಗುವಂತಾಗಬೇಕು. ಆಫೀಸು ಸಮಯ ಮುಗಿದ ನಂತರವೂ ಸರಕಾರ ಸಕ್ರಿಯವಾಗಿರಬೇಕು. ಸರಕಾರಿ ಕಚೇರಿಯಲ್ಲಿ ಇಂಟರ್ನೆಟ್ ಸಂಪರ್ಕ, ವೈಫೈ ಕಡ್ಡಾಯವಾಗಬೇಕು. ಇದರಿಂದ ಸರಕಾರ ಕ್ಷಿಪ್ರ ಗತಿಯಲ್ಲಿ ಕೆಲಸ ಮಾಡಲು ಅನುಕೂಲವಾಗುತ್ತದೆ.
- ಒಂದು ದೇಶ ಶೀಘ್ರ ಪ್ರಗತಿ ಹೊಂದಿದೆಯೆಂದರೆ, ಅಲ್ಲಿನ ಸರಕಾರ, ಆಡಳಿತ ಯಂತ್ರ ಕ್ರಿಯಾಶೀಲವಾಗಿದೆ ಎಂದರ್ಥ. ನಮ್ಮ ದೇಶ ವಿಶ್ವದಲ್ಲಿ ನಂಬರ್ ಒನ್ ಸ್ಥಾನವನ್ನು ಹೊಂದಬೇಕೆಂದು ನಾವೆಲ್ಲ ಬಯಸುವುದಾದರೆ, ಈ ಹೊಸ ಬದಲಾವಣೆಗೆ ನಮ್ಮನ್ನು ಒಡ್ಡಿಕೊಳ್ಳಬೇಕು. ದೇಶ ಮುಂದುವರಿದರೆ, ಪ್ರಗತಿ ಯಾದರೆ ಅದರ ಲಾಭ ನಮಗೇ ದಕ್ಕುತ್ತದೆ. ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ಎಲ್ಲ ದೇಶಗಳಿಗೂ ಸಮ ಅವಕಾಶಗಳಿವೆ. ಯಾರು ಬೇಕಾದರೂ ನಂಬರ್ ಒನ್ ಸ್ಥಾನಕ್ಕೆ ಬರಬಹುದು. ನಮಗಿರುವ ಅವಕಾಶವನ್ನು ಬೇರೆಯವರಿಗೆ ಬಿಟ್ಟುಕೊಡುವುದು ಮೂರ್ಖತನ. ಮಕ್ತೌಮ್ ಭಾಷಣ ಕೇಳಿದ ನಂತರ, ಇಂಥದ್ದೊಂದು ಮಾತನ್ನು ನಮ್ಮ ಪ್ರಧಾನಿ, ಮುಖ್ಯಮಂತ್ರಿಯವರು ಸರಕಾರಿ ಸಿಬ್ಬಂದಿಯನ್ನು ಕುಳ್ಳಿರಿಸಿಕೊಂಡು ಹೇಳಬಾರದಿತ್ತಾ ಎಂದೆನಿಸಿತು.

ಭೋಳೆ ಭವಾನಿರಾಯನ ಭಾಷಣ ವೈಖರಿ

ಪ್ರಾಣೇಶ್ ಪ್ರಪಂಚ

ಗಂಗಾವತಿ ಪ್ರಾಣೇಶ್

vveditoped@gmail.com

ಭವಾನಿ ಎಂಬೊಬ್ಬ ಗೆಳೆಯನಿದ್ದಾನೆ. ಗಾಬರಿಯಾದಿರಾ? ಭವಾನಿ ಎಂಬುದು ಹುಡುಗಿ ಹೆಸರಲ್ಲವೇ ಎಂದು. ಹೌದು, ಆದರೆ ಇವನು ಭವಾನಿರಾವ್. ಬಹಳ ಕಾಲ ಮಕ್ಕಳಾಗದೆ, ಮದುವೆಯಾಗಿ ಹನ್ನೆರಡು ವರ್ಷಗಳ ಮೇಲೆ ಅವನ ತಂದೆ – ತಾಯಿಗಳು ತುಳಜಾಭವಾನಿಗೆ ಹರಕೆ ಕಟ್ಟಿಕೊಂಡ ಮೇಲೆ ಹುಟ್ಟಿದವನಾದ್ದರಿಂದ ಅವನಿಗೆ ಭವಾನಿ ಎಂದೇ ನಾಮಕರಣ ಮಾಡಲಾಯಿತಂತೆ. ಅವನ ತಂದೆ ಪೀರಲದೇವರಿಂದ ಹಿಡಿದು ಪರಮೇಶ್ವರನವರೆಗೂ, ಕೋಲ್ಕತಾದ ಕಾಳಿಯಿಂದ ಹಿಡಿದು, ಕೃಷ್ಣನ ಉಡುಪಿಯವರೆಗೂ ಹನ್ನೆರಡು ವರ್ಷ ಎಲ್ಲ ಊರುಗಳನ್ನು ಸುತ್ತಿದ್ದರು. ಅದರಿಂದಾಗಿ ಇವರ ಅಡ್ಡಾಡಿದ ರೈಲು, ಬಸ್ಸು, ಟ್ಯಾಕ್ಸಿಗಳಿಗೆ ಲಾಭವಾಯಿತೇ ವಿನಃ ಇವರಿಗೆ ಸಂತಾನ ಲಾಭವಾಗಲಿಲ್ಲ. ಕಡೆಗೆ ಮುಂದೆ ಭಾರತದ ನಕಾಶೆ ಗೋಡೆಗೆ ಇಳಿಬಿಟ್ಟು, ಕಣ್ಣು ಮುಚ್ಚಿಕೊಂಡು ಗಂಡ – ಹೆಂಡತಿ ಇಬ್ಬರೂ ದೂರದಿಂದ ಅಂದರೆ, ಮನೆಯಲ್ಲಿಯೇ ಗೋಡೆಯ ನಕಾಶೆದೆಡೆಗೆ ನಡೆಯುತ್ತಾ ಬಂದು ಬಲಗೈಯಿಂದ ನಕಾಶೆಗೆ ಕುಂಕುಮ ಹಚ್ಚುತ್ತಿದ್ದರು. ನಂತರ ಕಣ್ಣಿಗೆ ಕಟ್ಟಿಕೊಂಡಿದ್ದ ಬಟ್ಟೆ ಬಿಚ್ಚಿ ಕುಂಕುಮ ಹತ್ತಿದ್ದ ದೇವರಿರುವ ಆ ಊರಿಗೆ ಹೋಗಿ ಅಲ್ಲಿನ ದೇವರಿಗೇ ಹನ್ನೊಂದು, ಇಪ್ಪತ್ತೊಂದು ದಿನ ಸೇವೆ ಮಾಡುತ್ತಿದ್ದರು.

ಹಾಗೆ ಕುಂಕುಮ ಲಾಭ ಪಡೆದು ವರ ಕೊಟ್ಟಾಕಿ ತುಳಜಾಭವಾನಿ. ಹೀಗಾಗಿ ಅವನು ಗಂಡುಮಗನಾದರೂ ಅವನಿಗೆ ಭವಾನಿ ಎಂದೇ ನಾಮಕರಣ ಮಾಡಿದ್ದರು. ಏಕೆಂದರೆ, ಎಲ್ಲಾ ಕ್ಷೇತ್ರಗಳ ಹೆಸರು ಗಳಿಗೂ ನನಗೆ ಗಂಡಸು ಮಗ ಹುಟ್ಟಿದರೆ ನಿನ್ನ ಹೆಸರೇ ಇಡ್ತೀನಿ ಎಂಬ ಆಮಿಷ ತೋರಿಸಿದ್ದರು. ಆ ಆಮಿಷಕ್ಕೆ ಬಲಿಯಾದಾಕಿ ತುಳಜಾಭವಾನಿ. ಹೀಗಾಗಿ ನನ್ನ ಗೆಳೆಯ ಗಂಡಾದರೂ ಭವಾನಿ. ಅವನ ಹೆಸರನ್ನು ನಾನು ರಸ್ತೆ, ಮಾರ್ಕೆಟ್, ಸಿನಿಮಾ ಥೇಟರ್‌ಗಳಲ್ಲಿ ಜೋರಾಗಿ ಕೂಗುವಂತಿರಲಿಲ್ಲ. ಕೂಗಿದರೆ, ಕನಿಷ್ಠ ನಾಲ್ಕೈದು ಜನ ಹುಡುಗಿಯರು ನನ್ನ ಕಡೆ ಕೆಕ್ಕರಿಸಿ ನೋಡಿದ್ದೂ ಉಂಟು. ಒಮ್ಮೊಮ್ಮೆ ಅವರ ಲವರ್‌ಗಳು, ಗಂಡಂದಿರು ನನ್ನನ್ನು ಹೊಡೆಯಲು ಬಂದದ್ದೂ ಉಂಟು. ಹೀಗಾಗಿ ನಾನು ಅವನನ್ನು ಕೂಗುವುದನ್ನು ಬಿಟ್ಟು, ಕಣ್ಣಿನಿಂದಲೇ ಗುರುತಿಸಿ ಅವನ ಪಕ್ಕವೇ ಹೋಗಿ ನಿಂತು ಹೆಗಲ ಮೇಲೆ ಕೈ ಹಾಕಿ ಮಾತನಾಡಿಸುತ್ತಿದ್ದೆ. ಕಣ್ಣಿಗೆ ಕಾಣಿಸುವಂತೆ ನಿಲ್ಲು ಮಾರಾಯ, ನಿನ್ನ ಹೆಸರು ಕೂಗುವಂತೆ ಮಾಡಿ, ನನ್ನನು ಕಂಡವರಿಂದ ಒದೆಸಬೇಡ ಎಂದೇ ಅವನಿಗೆ ವಿನಂತಿ ಮಾಡಿಕೊಳ್ಳುತ್ತಿದ್ದೆ.

ಪರೀಕ್ಷೆಯಲ್ಲೂ ಅಷ್ಟೆ, ಅವನು ಬರೆದ ಉತ್ತರ ಪತ್ರಿಕೆಗಳಿಗೆ ಪಾಪ. ಹುಡುಗಿ ಎಂದು ತಿಳಿದು ಪೇಪರ್ ಚೆಕ್ ಮಾಡುವವರು ಹೆಚ್ಚು ಮಾರ್ಕ್ಸ್ ಹಾಕುತ್ತಿದ್ದರು. ಇಂಟರ್‌ವ್ಯೂವ್‌ಗಳಲ್ಲೂ ಹುಡುಗಿ ಎಂದು ಮೊದಲು ಕರೆದು, ಇವನನ್ನು ನೋಡಿ ಸಂದರ್ಶಕರು ಪೆಚ್ಚಾಗುತ್ತಿದ್ದರು. ಹೀಗಾಗಿ ಎಂಜಿನೀಯರಿಂಗ್ ಓದಿ ಕಂಟ್ರ್ಯಾಕ್ಟರ್ ಆದ. ಭವಾನಿರಾವ್ ಎಂದು ಹೆಸರು ಬದಲಾಯಿಸಿಕೊಂಡರೂ ಭವಾನಿ ಎಂದರೆ ಹೆಣ್ಣು, ರಾವ್ ಆಕೆಯ ಗಂಡನ ಹೆಸರಿರಬೇಕೆಂದು ಅಲ್ಲೂ ಟೆಂಡರ್‌ಗಳನ್ನು ತನ್ನ ಹೆಸರಿಗೆ ಗಿಟ್ಟಿಸಿಕೊಂಡು ಶ್ರೀಮಂತ ನಾದ. ಊರಿನ ಎಲ್ಲ ಸಂಘ – ಸಂಸ್ಥೆಗಳಲ್ಲೂ ಅಗ್ರಸ್ಥಾನ, ಗೌರವ ಸದಸ್ಯತ್ವ ಇವನಿಗೆ. ಹಣ ಬಂದಂತೆಲ್ಲ ಮೌಢ್ಯ, ದಡ್ಡತನ, ದುಡುಕು, ಕೋಪ, ಜತೆಜತೆಗೆ ಬಿ.ಪಿ., ಶುಗರ್ ಇವನನ್ನು ಅರಸಿಕೊಂಡು ಬಂದವು. ಸದಾ ಮರಳು, ಸಿಮೆಂಟ್, ಸೈಟು, ಕುಷನ್ನು ಪದಗಳನ್ನೇ ಆಡುತ್ತಿದ್ದು, ಬೇರೆ ಶಬ್ದಗಳನ್ನೇ ಅರಿಯದವನಂತೆ, ಆಡದವನಂತೆ ಆಗಿಹೋದ.

ಮತ್ತೊಬ್ಬ ರಿಟಾಯರ್ಡ್ ಕಾಂಟ್ರ್ಯಾಕ್ಟರ್‌ನ ಮಗಳನ್ನು ಮದುವೆಯಾದ, ಆಕೆಯೂ ಎರಡು ಹೆಣ್ಣುಗಳನ್ನು ಹೆತ್ತು, ಗಜಗಮನೆಯಾಗಿ ಇವನ ವಿಶಾಲವಾದ ಮನೆತುಂಬಿದಳು. ಆಕೆ ಕೂತಳೆಂದರೆ, ನಾಲ್ಕೈದು ಜನ ನಿಲ್ಲಬೇಕಾಗಿತ್ತು. ಅಷ್ಟು ಸ್ಥಳವನ್ನು ಆಕೆಯ ದೇಹ ಆಕ್ರಮಿಸುತ್ತಿತ್ತು. ಆಕೆ ಆಕ್ರಮಿಸಿದ ಜಾಗ ನೋಡಿದರೆ ಸಾಕು, ಈಕೆಯೊಬ್ಬ ಕಂಟ್ರ್ಯಾಕ್ಟರ್‌ನ ಹೆಂಡತಿ ಎನಿಸಿಬಿಡುತ್ತಿತ್ತು. ಮನೆ ತುಂಬಿದ ಮಡದಿ ಎಂದು ಈ ಅರ್ಥದಲ್ಲಿಯೂ ನಾವು ಹೇಳಬಹುದು.

ಭವಾನಿರಾವ್‌ಗೆ ಹಣ ಹೆಚ್ಚಾದಂತೆ ರೋಗಗಳೂ, ರೋಗಗಳು ಹೆಚ್ಚಾದಂತೆ ದೇವರ ಮೇಲೆ ಭಕ್ತಿಯೂ ಹೆಚ್ಚಾಗಲಾರಂಭಿಸಿತು. ಮನೆಯಿಂದ ಎತ್ತಲಿಗೆ ಹೋಗಲಿಕ್ಕೂ ಜಾತಕ, ಶಾಸ್ತ್ರ, ರಾಹುಕಾಲಗಳನ್ನು ಗಮನಿಸಲು ಶುರು ಮಾಡಿದ. ಪೇಪರ್ ಬಂದ ಕೂಡಲೇ ತನ್ನ ದಿನಭವಿಷ್ಯ ಓದಿಯೇ, ದೇಶದ ಭವಿಷ್ಯದ ವಿಷಯಗಳನ್ನು ಓದುತ್ತಿದ್ದ. ತನ್ನ ಮನೆಯ ಕಿಟಕಿಯಿಂದ ಕಾಣುವ ಗುಡ್ಡಕ್ಕೂ ನಮಸ್ಕರಿಸುತ್ತಿದ್ದ. ಕಾರ್‌ನಲ್ಲಿ ಪ್ರಯಾಣಿಸುವಾಗಲಂತೂ ಎದುರಿಗೆ ಬರುವ ಲಾರಿಗಳು ಮಾರುತಿ ಟ್ರಾನ್ಸ್‌ಪೋರ್ಟ್, ವೆಂಕಟೇಶ್ವರ ಟ್ರಾನ್ಸ್‌ಪೋರ್ಟ್ ಎಂದು ಬರೆದಿದ್ದು ಅಲ್ಲಿ ಮಾರುತಿ, ವೆಂಕಟೇಶ್ವರನ ಚಿತ್ರ ಬಿಡಿಸಿದ್ದರೆ ಅವಕ್ಕೂ ಕೈ ಮುಗಿಯುತ್ತಿದ್ದ. ಕೈ ಬೆರಳಿಗೆಲ್ಲ ರಾಘವೇಂದ್ರ, ಶಿರಡಿ ಸಾಯಿಬಾಬಾ, ವೆಂಕಟೇಶ್ವರ, ಆಂಜನೇಯನ ಪದಕಗಳಿರುವ ಉಂಗುರಗಳು, ಅವಕ್ಕೆಲ್ಲ ನಿಮಿಷಕ್ಕೊಮ್ಮೆ ಲೊಚ ಲೊಚ ಮುದ್ದಿಸುತ್ತಾ, ಐದು ಸೆಕೆಂಡುಗಳಿಗೊಮ್ಮೆ ಕಣ್ಣಿಗೊತ್ತಿಕೊಳ್ಳುತ್ತಿದ್ದ.

ಕಂಟ್ರ್ಯಾಕ್ಟರ್‌ನಾಗಿ ಹೆಸರು ಮಾಡಿದ್ದರಿಂದ ಹಣ, ಹೆಸರು ಗಳಿಸಿ, ರಾಜಕೀಯಕ್ಕೆ ಇಳಿಯುವ ಮೂರ್ಖತನವನ್ನು ಮಾತ್ರ ಮಾಡಲಿಲ್ಲ. ಇದು ಆತ ನಂಬಿದ್ದ ದೈವ ಕೃಪೆ ಎನ್ನಬಹುದು. ಊರಲ್ಲಿ ಯಾವುದೇ ಗುಡಿ, ಚರ್ಚ್, ಮಸೀದಿ ಕಟ್ಟಿದ್ದರೂ ಈತನ ಚಂದಾ ಹಣವಿಲ್ಲದೆ ಅವು ಮೇಲೆ ಏಳುತ್ತಿರಲಿಲ್ಲ. ಒಮ್ಮೊಮ್ಮೆ ತಿರುಪತಿ, ಮಂತ್ರಾಲಯ, ಶ್ರೀಶೈಲ, ಶೃಂಗೇರಿ ಮೂಲಮಠದವರು ತಮ್ಮ ಶಾಖಾಮಠಗಳನ್ನು ನಮ್ಮೂರಲ್ಲಿ ಕಟ್ಟಿಸಿದರೂ ಅದರ ಮೇಲುಸ್ತುವಾರಿ, ಹಣಕಾಸಿನ ನಿರ್ವಹಣೆಯನ್ನು ಭವಾನಿರಾವ್‌ಗೆ ಕೊಡುತ್ತಿದ್ದರು. ದೇವರ ದುಡ್ಡನ್ನು ನಮ್ಮ ಭವಾನಿ ಸರ್ಪ ಕಾಯ್ದಂತೆ ಕಾಯುತ್ತಿದ್ದ. ತನ್ನ ಕೈಯಿಂದಲೇ ಹಾಕುತ್ತಿದ್ದನಾಗಲೀ, ಅವರು ಕಳಿಸುವ ಹಣವನ್ನು ಅಪ್ಪಿತಪ್ಪಿಯೂ ತನಗಾಗಿ ಬಳಸಿಕೊಳ್ಳುತ್ತಿರಲಿಲ್ಲ. ಆದರೆ ಈತನನ್ನು ಭಾಷಣಕ್ಕೆ ಮಾತ್ರ ವಿನಂತಿಸಿಕೊಳ್ಳಬಾರದು. ಶಬ್ದಾಡಂಬರವಿಲ್ಲ, ಹಾಗೆಯೇ ಆಡಬೇಕಾದ್ದು ಯಾವುದು, ಆಡಬಾರದೆಂಬುದು ಯಾವುದು ಎಂಬ ಭೇದವೂ ಇಲ್ಲ. ಮೆದುಳನ್ನು ಬೀಗಹಾಕಿ ಮುಚ್ಚಿಟ್ಟು, ನಾಲಿಗೆ ಹೊರಳಿದಂತೆಲ್ಲ, ಬಾಯಿಯ ಸ್ನಾಯುಗಳೆಲ್ಲ ಭರ್ಜರಿ ಎಕ್ಸರ್‌ಸೈಜ್ ಆಗುವಂತೆ ಮಾತನಾಡಿಬಿಡುತ್ತಿದ್ದ. ಹೆಣ್ಣು ಮಕ್ಕಳಿದ್ದಾರೆ ಸಭೆಯಲ್ಲಿ ಎಂಬುದನ್ನು ಯೋಚಿಸದೇ, ಒಳಗೆ ಸುಳಿಯುವಂತೆ ಹೆಣ್ಣು ಅಲ್ಲ, ಗಂಡೂ ಅಲ್ಲ ಕಾಣಾ ರಾಮನಾಥ ಎಂಬ ವಚನವನ್ನು ಅಕ್ಷರಶಃ ಪಾಲಿಸಿ, ಕೇವಲ ಆತ್ಮಗಳಿಗೆ ಮಾತ್ರ ನಾನು ಹೇಳುತ್ತಿದ್ದೇನೆ ಎಂಬ ಅಲೌಕಿಕತೆಗೆ ಹೋಗಿ ಮಾತನಾಡುತ್ತಿದ್ದ.

ಹೆಚ್ಚಾಗಿ ಈತ ಮಾತನಾಡುತ್ತಿದ್ದುದೇ ಧಾರ್ಮಿಕ ಸಭೆಗಳಲ್ಲಿ. ಯಾವ ಸ್ವಾಮಿಗಳು ಬಂದರೂ ಈತನ ಬಂಗಲೆಯಲ್ಲಿಯೇ ಅವರ ವಸತಿ. ಬಂಗಲೆ ಮೇಲ್ಭಾಗದಲ್ಲಿ ಸ್ವಾಮಿಗಳ ಸನ್ನಿಧಾನ ಎಂಬ ಪ್ರತ್ಯೇಕ ಕೋಣೆಯನ್ನೇ ಕಟ್ಟಿಸಿದ್ದ. ಆ ಕೋಣೆಗೆ ಕಸ ಬಳಿಯೋ ತಿಮ್ಮಕ್ಕನ ವಿನಃ ಬೇರಾರಿಗೂ ಪ್ರವೇಶವಿಲ್ಲ. ಸ್ವತಃ ನಮ್ಮ ಭವಾನಿ ರಾಯನೇ ಒಳಗೆ ಹೋಗುತ್ತಿದ್ದಿಲ್ಲ. ಇದು ಕೇವಲ ಸ್ವಾಮಿಗಳಿಗೆ ಹಾಗೂ ತಿಮ್ಮಕ್ಕನಿಗೆ ಮಾತ್ರ ಮೀಸಲಿರುವ ಕೋಣೆ ಎಂದು ಎಷ್ಟೋ ಸಾರಿ ಭಾಷಣದಲ್ಲಿಯೇ ಹೇಳಿ, ಜನರನ್ನು, ಸ್ವಾಮಿಗಳನ್ನು ತಬ್ಬಿಬ್ಬುಗೊಳಿಸಿದ್ದೂ ಉಂಟು. ಆಡಬೇಕೆಂದೇ ಪಾಪ ಆಡುತ್ತಿರಲಿಲ್ಲ. ಆಡುವಾಗ ಬಂದು ಬಿಡುತ್ತಿತ್ತು.

ಸ್ವಾಮಿಗಳು ಬಳ್ಳಾರಿಗೆ ಬಂದರೆಂದರೆ ಮುಗಿಯಿತು. ಅಲ್ಲಿಂದ ಗಂಗಾವತಿಗೆ ಬರಲು ಭವಾನಿರಾಯನ ಕಾರಿನಲ್ಲಿ ಸ್ವಾಮಿಗಳು ಕೂರಲೇಬೇಕು. ಒಲ್ಲೆನೆಂದರೆ? ಕೈಕಾಲು ಕಟ್ಟಿ ಕಾರಿನೊಳಗೆ ಕೂರಿಸಿಕೊಳ್ಳುತ್ತಿದ್ದ, ಕೂತ ಮೇಲೆ ಆ ಪಾದಗಳನ್ನು ಕಣ್ಣೀರಿನಿಂದ ತೊಳೆಸುತ್ತಿದ್ದ. ಸ್ವಾಮಿಗಳಿಗೆ ಕಾಣಿಕೆ ಕೊಡುವಾಗಲೂ ಅಷ್ಟೆ. ಎಷ್ಟು ಕೊಡಲಿ ಸ್ವಾಮಿ? ಎಂದೇ ವಿನಯನಾಗಿ ಕೇಳುತ್ತಿದ್ದ. ವಿಶ್ವಾಮಿತ್ರರು ಹರಿಶ್ಚಂದ್ರನಿಗೆ ಹೇಳಿದಂತೆ ಒಂದು ಮದಗಜದ ಮೇಲೆ ಆಜಾನುಬಾಹು ವ್ಯಕ್ತಿಯೊಬ್ಬ ನಿಂತು ರೊಯ್ಯನೆ ಕವಣೆ ಕಲ್ಲನ್ನು ಬೀಸಿದರೆ, ಅದು ಎಷ್ಟು ಮೇಲಕ್ಕೆ ಹೋಗುತ್ತದೆಯೋ ಅಷ್ಟು ಎತ್ತರದ ರಾಶಿ ಹೊನ್ನು ಕೊಡು ಎಂದು ಕೇಳಿದರೆ, ಮಹದಪ್ಪಣೆ ಸ್ವಾಮಿ ಧನ್ಯನಾದೆ ಎಂದು ಹರಿಶ್ಚಂದ್ರನಂತೆಯೇ ಒಪ್ಪಿ ಕೊಟ್ಟೇ ಬಿಡುವಂಥ ವ್ಯಕ್ತಿ. ಆದರೆ ಈಗಿನ ಸ್ವಾಮಿಗಳಿಗೆ ಪ್ರಧಾನಿ ಮೋದಿಯ ಭಯ. ಆಧಾರ ಕಾರ್ಡ್, ಪಾನ್ ಕಾರ್ಡ್, ಅಕೌಂಟ್ ನಂಬರ್, ಐ.ಟಿ ರಿಟರ್ನ್ಸ್ ಫೈಲ್ ಕಾಪಿಗಳನ್ನು ಹೊಂದಿಸಲಾಗದ್ದಕ್ಕೆ ಏನೋ, ಕಮ್ಮಿಯೇ ಕೇಳುತ್ತಿದ್ದರು.

ಇಂತಿರಲು ಭವಾನಿರಾಯನಿಗೆ ತಿರುಪತಿಯವರೇ ನಮ್ಮೂರಲ್ಲಿ ವೆಂಕಟೇಶ್ವರ ಸ್ವಾಮಿ ಮಂದಿರ ಕಟ್ಟಿಸಲು ತಿರುಪತಿಯಿಂದಲೇ ಹಣ ಕೊಡುವುದಾಗಿಯೂ, ಭವಾನಿರಾಯರೇ ಮುಂದೆ ನಿಂತು ಅದರ ನಿರ್ಮಾಣದ ಸಮಸ್ತ ಜವಾಬ್ದಾರಿ ಹೊತ್ತುಕೊಳ್ಳಬೇಕೆಂದೂ ಆಜ್ಞೆ ಮಾಡಿದಾಗ, ನಮ್ಮ ಭವಾನಿರಾಯನಿಗೆ ತಾನು ಹುಟ್ಟಿದ್ದೇ ಸಾರ್ಥಕವೆನಿಸಿತಲ್ಲದೆ, ತಾನು ಹುಟ್ಟಿದ್ದೇ ಈ ಮಂದಿರ ನಿರ್ಮಾಣಕ್ಕೆ ಎಂಬುದಾಗಿ ಭಾವಿಸಿ, ಹಗಲು – ರಾತ್ರಿ ಮುಂದೆ ನಿಂತು ಒಂದು ಪೈಸೆ ಪೋಲಾಗದಂತೆ ಅವರು ಕಳಿಸುವ ಹಣದ ಜತೆಗೆ ತನ್ನ ಹಣವನ್ನೂ ಸೇರಿಸಿ ಇನ್ನಷ್ಟು ವೈಭವೋಪೇತವಾಗಿ ಮಂದಿರ ನಿರ್ಮಾಣಕ್ಕೆ ನಿಂತ.

ಅದೇ ಬೇರೆಯವರಾಗಿದ್ದರೆ, ತಿರುಪತಿಯಿಂದ ಬರುವ ಕಂತಿನ ಹಣದಲ್ಲಿ ಮೊದಲು ಆ ಕಂಟ್ರ್ಯಾಕ್ಟರ್ ತನಗೊಂದು ಭವ್ಯ ಬಂಗಲೆ ಕಟ್ಟಿಸಿಕೊಂಡು, ಆ ಬಂಗಲೆಯಲ್ಲಿದ್ದು ಉಪಜೀವನಕ್ಕೊಂದು ತನ್ನ ಹೆಸರಲ್ಲಿ ಲಾಡ್ಜ್ ಕಟ್ಟಿಸಿಕೊಂಡು, ಆಮೇಲೆ ಹಣ ಉಳಿದರೆ ವೆಂಕಟೇಶ್ವರ ಮಂದಿರಕ್ಕೆ ಕೆಲಸ ಶುರು ಮಾಡುತ್ತಿದ್ದ. ಹದಿನೈದು ದಿನಕ್ಕೊಮ್ಮೆ 'ಕೆಲಸ ನಿಂತಿದೆ, ಹಣ ಬಿಡುಗಡೆ ಮಾಡಿ' ಎಂದು ವೆಂಕಟೇಶ್ವರ ಪಾದಪದ್ಮಗಳಿಗೆ ಅಹವಾಲು ಸಲ್ಲಿಸಿ ತನ್ನ ಪಾದಗಳನ್ನು ತನ್ನ ಊರಲ್ಲಿ ಗಟ್ಟಿಯಾಗಿ ಊರುವಂತೆ ನೋಡಿಕೊಳ್ಳುತ್ತಿದ್ದ.

ಆದರೆ ನಮ್ಮ ಭವಾನಿರಾಯ ಅರ್ಧಕ್ಕರ್ಧ ಮಂದಿರ ತನ್ನ ಹಣದಲ್ಲೇ ಕಟ್ಟಿಸಿ, ನಿಮಗೆ ಅನುಕೂಲವಾದಾಗ, ನಿಮಗೆ ಆ ಸ್ವಾಮಿ ತಿಳಿವಳಿಕೆ ಕೊಟ್ಟಷ್ಟು ಹಣ ಕಳಿಸಿರಿ, ಕೆಲಸ ಮುಗಿಯುತ್ತ ಬಂದಿದೆ. ತಿರುಪತಿಗೆ ಈ ಕರೋನಾ ಸಮಯದಲ್ಲಿ ಭಕ್ತರ ನಿರ್ಬಂಧದಿಂದಾಗಿ ಹಣದ ಅಡಚಣೆ ಆಗಿರಬಹುದು. ಚಿಂತೆಯಿಲ್ಲ, ಕೈಲಾದಷ್ಟು ಕಳಿಸಿರಿ ಎಂದು ಅವರಿಗೇ ಸಮಾಧಾನ ಹೇಳುತ್ತಿದ್ದ. 'ನನ್ನ ತಿರುಪತಿ ತಿಮ್ಮಪ್ಪ ಸ್ವಾಮಿಗೆ ಕುಬೇರನ ಸಾಲ ತೀರಿಸುವಲ್ಲಿ ನಾನೂ ಕಿಂಚಿತ್ ಸೇವೆ ಮಾಡುತ್ತಿದ್ದೇನೆಂದು ಸ್ವಾಮಿಯ ಏಕಾಂತ ಸೇವೆಯಲ್ಲಿ ಆತನ ಕಿವಿಗೆ ಮುಟ್ಟಿಸಿರಿ ಸಾಕು, ಧನ್ಯನಾದೆ ಎನ್ನುತ್ತಿದ್ದ. ಇಂತಹ ನಿಸ್ಪೃಹ ಜೀ ಭವಾನಿರಾಯ ಕೋಟಿಗಳ ವೆಚ್ಚದಲ್ಲಿ ಸ್ವಾಮಿಗೆ ಭವ್ಯ ದೇಗುಲ ಕಟ್ಟಿಸಿ, ಅವರಾಗೆ ಕೊಟ್ಟಿದ್ದಕ್ಕೆ ಕೇವಲ ಲಕ್ಷ ಸ್ವೀಕರಿಸಿ, ಅಲಕ್ಷ್ಯದಿಂದ ಅತ್ತ ಸರಿಸಿದ.

ಪ್ರತಿಷ್ಠಾಪನೆಗೆ ಅನೇಕ ಶ್ರೀಗಳು ಬಂದರು. ಮೂರು ದಿನ, ಮೂರು ಹೊತ್ತು ಜನ ಉಂಡುಂಡು ಮಂದಿರದಲ್ಲೆ ಮಲಗಿದರು. ಎಚ್ಚರವಾದಾಗ ದೇವರ ದರ್ಶನವನ್ನು ಮಾಡಿದರು. ಕೆಲವರಂತೂ ಕೂತಲ್ಲೆ ಕೈ ಮುಗಿದರು. ಕೊನೆಯ ದಿನ, ಅನೇಕ ಶ್ರೀಗಳು ಸೇರಿ ನಮ್ಮ ಭವಾನಿಯರಾಯನಿಗೆ ಸನ್ಮಾನ ಮಾಡಿದರು. ಅವರ ಪಾದಗಳಿಗೆ ಅಡ್ಡಬಿದ್ದ, ಮಲಗಿದ್ದಲ್ಲಿಯೇ ಹಾರ ಹಾಕಿಸಿಕೊಂಡ ನಾಗಲಿ, ಅವರ ಪಾದಬಿಟ್ಟು ಏಳಲಿಲ್ಲ, ಕಣ್ಣೀರಿನಿಂದ ನೆಲವೆಲ್ಲವನ್ನು ತೋಯಿಸಿಬಿಟ್ಟಿದ್ದ.

ಸನ್ಮಾನಕ್ಕೆ ಉತ್ತರವಾಗಿ, ದೇವಸ್ಥಾನ ಕಟ್ಟಲು ವಹಿಸಿದ ಕಷ್ಟಗಳ ಅನುಭವ ಹೇಳುವಂತೆ ಒತ್ತಾಯಿಸಿದಾಗ, ನಾಲ್ಕು ಮಾತನಾಡಲು ಎದ್ದು ನಿಂತು ನಾಲ್ಕು ನಿಮಿಷ ಹೋ.. ಎಂದು ಅತ್ತು ಮಾತು ಶುರು ಮಾಡಿದ. ನನ್ನ ಊರ ಬಾಂಧವರೇ, ಎಲ್ಲರ ದೈವಭಕ್ತಿಗೆ ಮೆಚ್ಚಿ ಯಂಕಪ್ಪ ನಮ್ಮೂರಿಗೆ ಬಂದ. ಇದನ್ನು ಕಟ್ಟಿಸುವಾಗ ಶ್ರೀ ವೆಂಕಟೇಶ್ವರ ಸ್ವಾಮಿ ನನ್ನ ವೈಯುಕ್ತಿಕ ಜೀವನದಲ್ಲೂ ಅನೇಕ ಮಾರ್ಪಾಡು, ಪವಾಡಗಳನ್ನು ಮಾಡಿದ. ನನಗಿಬ್ಬರು ಹೆಣ್ಣು ಮಕ್ಕಳು ನಿಮಗೆ ಗೊತ್ತೇ ಇದೆ. ಮಂದಿರ ಕಟ್ಟಿಸಲು ಮೊದಲು ಬುನಾದಿ ತೋಡಿಸಲು ಶ್ರೀಮಠದವರು ಮೂರು ಲಕ್ಷ ಕಳಿಸಿದರು. ನನ್ನ ಇಬ್ಬರು ಹೆಣ್ಣು ಮಕ್ಕಳ ಮದುವೆ ನಿಶ್ಚಯವನ್ನು ಅದ್ದೂರಿಯಾಗಿ ಮಾಡಿದೆ, ನಂತರ ಪಿಲ್ಲರ್‌ಗಳನ್ನು ಎಬ್ಬಿಸಿ ನಿಲ್ಲಿಸುವಾಗ, ಐದು ಲಕ್ಷ ಕಳಿಸಿದರು. ನನ್ನ ಮಕ್ಕಳ ಮದುವೆಗೆ ಬೇಕಾದ ವಸ್ತ್ರ, ಒಡವೆಗಳನ್ನು ಖರೀದಿಸಿದೆ. ಮುಂದೆ ಲಿಂಟಲ್, ಆರ್.ಸಿ.ಸಿ ಲೇವಲ್‌ಗೆ ಬಂದಾಗ ಹತ್ತು ಲಕ್ಷ ಕಳಿಸಿದರು. ಮಕ್ಕಳಿಬ್ಬರ ಮದುವೆಯನ್ನೂ ವಿಜೃಂಭಣೆ ಯಿಂದ ಮಾಡಿದೆ. ನೀವೆಲ್ಲ ನೋಡಿದಿರಿ. ಮುಂದೆ ಕರೆಂಟ್, ವೈರಿಂಗ್, ನಲ್ಲಿ ನೀರುಗಳ, ಪೈಪ್ ಲೈನಿಂಗ್ ಕೆಲಸ ಬಂದಾಗ ಐದು ಲಕ್ಷ ಬಂತು. ಅಳಿಯ, ಮಕ್ಕಳು ದುಬೈ, ಸಿಂಗಾಪುರ ಹನಿಮೂನ್‌ಗೆ ಹೋಗಿ ಬಂದರು.

ಜನರಲ್ಲಿ ಗುಜುಗುಜು ಶುರುವಾಯಿತು. ಸ್ವಾಮಿಗಳೇ ಸದ್ದು ಎಂದು ಜೋರಾಗಿ ಕೂಗಿ, ಜನಗಳಿಗೆ ಸಮಜಾಯಿಷಿ ನೀಡಿದರು. ಭವಾನಿರಾಯನ ಮಾತಿಗೆ, ನೀವು ಯಾರೂ ಪರೀರ್ಥ ಮಾಡಿಕೊಳ್ಳೋದು ಬೇಡ, ಅವರ ವ್ಯಕ್ತಿತ್ವ, ಮನಸ್ಸು ಎಂಥದೆಂದು ನಮಗೆಲ್ಲ ಗೊತ್ತಿದೆ. ಅವರ ಮಾತಿನ ಅರ್ಥ, ವೆಂಕಟೇಶ್ವರ ದೇವಸ್ಥಾನಕ್ಕೆ ಕಳಿಸಿದ ದುಡ್ಡಿನಲ್ಲಿ ಅವರು ತಮ್ಮ ಮಕ್ಕಳ ಮದುವೆ ಮಾಡಿಲ್ಲ, ದೇವಸ್ಥಾನದ ಪುಣ್ಯ ಕಾರ್ಯಕ್ಕೆ ಕೈ ಹಚ್ಚಿದ ಕೂಡಲೇ ಅವರ ಕೌಟುಂಬಿಕ ಕಾರ್ಯಗಳನ್ನೂ ಆ ವೆಂಕಟೇಶ್ವರ ಸ್ವಾಮಿಯೇ ಲೀಲಾಜಾಲವಾಗಿ ನಡೆಸಿ ಇವರನ್ನು ಐಕ ಜವಾಬ್ದಾರಿ, ಚಿಂತೆಗಳಿಂದ ಮುಕ್ತಗೊಳಿಸಿದ ಎಂಬರ್ಥವಾದ, ದೇವಸ್ಥಾನದ ಕಟ್ಟಡ ಮೇಲೇರಿದಂತೆಲ್ಲ ಇವರ ಜವಾಬ್ದಾರಿಗಳನ್ನು ಕೆಳಗಿಳಿಸುತ್ತಾ, ಇವರ ಭಾರವನ್ನು ಕಡಿಮೆ ಮಾಡಿದ ಎಂದು ಅರ್ಥೈಸಿಕೊಳ್ಳಬೇಕು ಎಂದು ಅಪ್ಪಣೆ ಕೊಡಿಸಿದಾಗ ಸಭೆಯ ಅರ್ಧ ಜನ ಚಪ್ಪಾಳೆ ಹೊಡೆದರೆ, ಇನ್ನರ್ಧ ಜನ 'ಹಾಗಿರಲಿಕ್ಕಿಲ್ಲ' ಎಂದು ಕಣ್ಣು ಹೊಡೆದರು. ಸುಮ್ಮನಿರದ ಭೋಳೇ ಭವಾನಿರಾಯ ಸ್ವಾಮಿಗಳು ನಾನು ಏನು ಮಾಡಿದರೂ ಹೀಗೆ ನನ್ನನ್ನು ಸಮರ್ಥಿಸಿಕೊಳ್ಳುತ್ತಾರೆ. ನನ್ನ ಪುಣ್ಯ, ದೊಡ್ಡದು ಎಂದು ಸಾಷ್ಟಾಂಗ ನಮಸ್ಕಾರ ಮಾಡಿದ.